MAGNA
Forward. For all.

# ನಡಾವಳಿ ಮತ್ತು ನೈತಿಕತೆ ನೀತಿ



# ಚೀಫ್ ಎಕ್ಸೆಕ್ಯುಟಿವ್ ಆಫೀಸರ್ ಅವರ ಸಂದೇಶ

ಮ್ಯಾಗ್ನದ ನಡಾವಳಿ ಮತ್ತು ನೈತಿಕತೆ ನೀತಿಯು ನಮ್ಮ ಸಂಸ್ಕೃತಿಯಲ್ಲಿ ಅಂತರ್ಗತವಾಗಿದೆ ಮತ್ತು ಅದು ನಮ್ಮ ಕಂಪನಿಯ ಉದ್ದೇಶ ಮತ್ತು ಮೂಲ ಮೌಲ್ಯಗಳನ್ನು ಬೆಂಬಲಿಸುತ್ತದೆ. ನಮ್ಮ ನಡಾವಳಿಯು ಒಂದು ಸಂಸ್ಥೆಯಾಗಿ ನಮ್ಮ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ ಹಾಗೂ ನಮಗೆ ಯಾವಾಗಲೂ ಸಮಗ್ರತೆಯಿಂದ ಕಾರ್ಯನಿರ್ವಹಿಸಲು ಮತ್ತು ಸರಿಯಾದ ಕೆಲಸ ಮಾಡಲು ಮಾರ್ಗದರ್ಶನ ನೀಡುವ ಪ್ರಮುಖ ತತ್ವಗಳನ್ನು ಒತ್ತಿಹೇಳುತ್ತದೆ.

ನಮ್ಮ ಖ್ಯಾತಿಯನ್ನು ಕಾಪಾಡಲು ಮತ್ತು ಮ್ಯಾಗ್ನದ ಸತತ ಯಶಸ್ಸಿಗೆ ಕೊಡುಗೆ ನೀಡಲು, ನಮ್ಮ ನಡಾವಳಿಯ ಮೌಲ್ಯಗಳನ್ನು ಪರಿಶೀಲಿಸಲು, ಅರ್ಥಮಾಡಿಕೊಳ್ಳಲು ಮತ್ತು ಅದರಲ್ಲಿರುವಂತೆ ಬದುಕಲು ಕಲಿಯುವುದು ನಮಗೆಲ್ಲ ಪ್ರಮುಖವಾಗುತ್ತದೆ ನಮ್ಮ ನಡ್ವವಳಿಯು ನಾವು ಪ್ರತಿದಿನ ಅನುಸರಿಸಬಹುದಾದ ಮಾರ್ಗಸೂಚಿಯಾಗಿದೆ, ಇದು ಮ್ಯಾಗ್ನ ಮೇಲೆ ಪರಿಣಾಮ ಬೀರುವ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಯಾವುದು ಸ್ವೀಕಾರಾರ್ಹವಲ್ಲ ಎಂಬುದರ ಬಗ್ಗೆ ನಮಗೆ ಮಾರ್ಗದರ್ಶನ ನೀಡುತ್ತದೆ.

2022 ರಲ್ಲಿ, ಎಥಿಸ್ಪಿಯರ್ ಮ್ಯಾಗ್ನವನ್ನು ವಿಶ್ವದ ಅತ್ಯಂತ ನೈತಿಕ ಕಂಪನಿಗಳಲ್ಲಿ ಒಂದೆಂದು ಗುರುತಿಸಿತು. ಈ ಗೌರವವನ್ನುಅತ್ಯುನ್ನತ ಕಾರ್ಯಕ್ರಮಗಳೊಂದಿಗೆ ವ್ಯಾಪಾರ ಸಮಗ್ರತೆಯನ್ನು ಮುನ್ನಡೆಸುವ ಬದ್ಧತೆಯನ್ನು ಕಾಯ್ದಿರಿಸಿಕೊಂಡ ಆಯ್ದ ಸಂಸ್ಥೆಗಳಿಗೆನೀಡಲಾಗುತ್ತದೆ. ನಮ್ಮ ಸಮರ್ಪಿತ ಉದ್ಯೋಗಿಗಳ ಬಗ್ಗೆ ನನಗೆ ಹೆಮ್ಮೆ ಇದೆ, ಅವರು ಮ್ಯಾಗ್ನಗೆ ಬದ್ಧರಾಗಿದ್ದಾರೆ ಮತ್ತು ತಾವು ಮಾಡುವ ಎಲ್ಲ ಕೆಲಸದಲ್ಲೂ ಉನ್ನತ ನೈತಿಕ ಮಾನದಂಡಗಳನ್ನು ಅನ್ವಯಿಸುತ್ತಾರೆ. ನಮ್ಮ ಉದ್ಯೋಗಿಗಳೇ ನಮ್ಮ ಯಶಸ್ಸಿನ ಕೀಲಿಕೈ.

ಮ್ಯಾಗ್ನಗಾಗಿ ನಿಮ್ಮನ್ನು ನೀವು ಸತತವಾಗಿ ಮುಡಿಪಾಗಿಸಿರುವುದಕ್ಕೆ ಹಾಗೂ ನಮ್ಮ ನೈತಿಕ ಮೌಲ್ಯಗಳನ್ನು ಎತ್ತಿಹಿಡಿಯುವಲ್ಲಿ ತೋರುವ ಬದ್ಧತೆಗೆ ಧನ್ಯವಾದಾಗಳು.

ಸ್ವಾಮಿ ಕೋಟಗಿರಿ
ಚೀಫ್ ಎಕ್ಸೆಕ್ಯುಟಿವ್ ಆಫೀಸರ್

# ಮುಖ್ಯ ಅನುಸರಣೆ ಅಧಿಕಾರಿಗಳಿಂದ ಸಂದೇಶ

ಮ್ಯಾಗ್ನದ ನಡಾವಳಿ ಮತ್ತು ನೈತಿಕತೆಯ ನೀತಿಯು ನಮ್ಮ ಎಲ್ಲಾ ವ್ಯಾಪಾರ ವ್ಯವಹಾರಗಳಲ್ಲಿ ನಾವು ಪ್ರಾಮಾಣಿಕತೆ ಮತ್ತು ಸಮಗ್ರತೆಯಿಂದ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳುವ ನಮ್ಮ ಮಾರ್ಗಸೂಚಿಯಾಗಿದೆ. ಮ್ಯಾಗ್ನದಲ್ಲಿ ಅನೇಕ ಸಮಯದಿಂದ ಕೆಲಸ ಮಾಡುತ್ತಿರುವ ಉದ್ಯೋಗಿಯೊಬ್ಬರು ಇತ್ತೀಚಿಗೆ ನನಗೊಂದು ಇ-ಮೇಲ್ ಕಳಿಸಿದ್ದರು ಅದರಲ್ಲವರು ಹೇಳ್ತಾರೆ ಅವರು ಎಂದಿಗೂ ಮ್ಯಾಗ್ನದ ಹೆಮ್ಮೆಯ ಉದ್ಯೋಗಿಯಾಗಿದ್ದಾರೆ, ಆದರೆ ತಾವು ಕೆಲಸ ಮಾಡುತ್ತಿರುವ ಕಂಪನಿಯಲ್ಲಿ ನೈತಿಕತೆ ಮತ್ತು ಸಮಗ್ರತೆಯನ್ನು ಪ್ರಮುಖ ಆದ್ಯತೆಯನ್ನಾಗಿ ಮಾಡುತ್ತಿರುವುದು ಅವರು ಇನ್ನಷ್ಟು ಹೆಮ್ಮೆ ಪಡುವಂತೆ ಮಾಡಿದೆ ಎಂದು.

ನನಗೂ ಕೂಡ ನಮ್ಮ ಉದ್ಯೋಗಿಗಳು ನಡಾವಳಿ ಹಾಗೂ ನೈತಿಕತೆಯ ನೀತಿಯನ್ನು ಅನುಸರಿಸುವಲ್ಲಿ ಮಹತ್ತರ ಕೆಲಸ ಮಾಡಿದ್ದಾರೆ ಹಾಗೂ ತಮಗೆ ಬೇಕಾದ ಉತ್ತರಗಳನ್ನು ಪಡೆಯುತ್ತಿದ್ದಾರೆ ಎನ್ನುವುದಕ್ಕಾಗಿ ತುಂಬಾ ಹೆಮ್ಮೆ ಇದೆ. ಕೆಲವೊಮ್ಮೆ ಆ ಉತ್ತರಗಳು ಸ್ಪಷ್ಟವಾಗಿರುವುದಿಲ್ಲ ಅಥವಾ "ಮಸುಕಾದ" ವಲಯದಲ್ಲಿರುತ್ತವೆ. ನಮ್ಮ ಪ್ರಾದೇಶಿಕ ಅನುಸರಣೆ ಅಧಿಕಾರಿಗಳಿಗೆ ಹೆಚ್ಚಿನ ಪ್ರಶ್ನೆಗಳು ಬರುತ್ತಿರುವುದನ್ನು
ಹಾಗೂ ನಮ್ಮ ಆಂತರಿಕವಾಗಿ ಲಭ್ಯವಿರುವ ಅನುಸರಣೆ ಸಂಪನ್ಮೂಲಗಳ ಹೆಚ್ಚಿನ ಬಳಕೆಯಾಗುತ್ತಿರುವುದನ್ನು ನಾವು ಗಮನಿಸಿದ್ದೇವೆ. ಹೆಚ್ಚಿನ ಉದ್ಯೋಗಿಗಳು ನಮ್ಮ ಬಹಿರಂಗಪಡಿಸುವಿಕೆಯನ್ನು ಬಳಸುವುದನ್ನೂ ನೋಡುತ್ತಿದ್ದೇವೆ! ಇದು ಸರ್ಕಾರಿ ಅಧಿಕಾರಿಗಳಿಗೆ ಆಸಕ್ತಿ ಮತ್ತು ಉಡುಗೊರೆಗಳ ಸಂಘರ್ಷಗಳನ್ನು ಬಹಿರಂಗಪಡಿಸುವ ಮತ್ತು ಸಮಗ್ರತೆಯನ್ನು ಪರಿಶೀಲನೆ ಮಾಡುವ ವ್ಯವಸ್ಥೆಯಾಗಿದೆ. ಈ ವ್ಯವಸ್ಥೆಯು ನಮಗೆ ಮ್ಯಾಗ್ನವನ್ನು ಪ್ರತಿನಿಧಿಸುವ ಥರ್ಡ್ ಪಾರ್ಟಿಗಳು ನೈತಿಕತೆಯಿಂದ ಕೂಡಿದ ವ್ಯಾಪಾರ ಅಭ್ಯಾಸಗಳಿಗಾಗಿ ಖ್ಯಾತರಾಗಿದ್ದಾರೆ ಎಂದು ಖಚಿತಪಡಿಸಲು ಅನುವು ಮಾಡಿಕೊಡುತ್ತದೆ. ಉದ್ಯೋಗಿಗಳು "ಮ್ಯಾಗ್ನ ಅಪ್‌ಸ್ಟ್ಯಾಂಡರ್ಸ್" ಆಗಿರಲು ಬದ್ಧರಾಗಿದ್ದಾರೆ. ಇದು ಅನುಚಿತ ವರ್ತನೆ ಕಂಡುಬಂದಾಗ ಮೂಕ ವೀಕ್ಷಕರಾಗದೆ ಮಾತನಾಡಬೇಕು ಎಂಬುದನ್ನು ತಿಳಿಸಕೊಡುತ್ತದೆ.

ನಾವು ಅತ್ಯಂತ ಸಂಕೀರ್ಣವಾದ ವ್ಯವಹಾರದಲ್ಲಿದ್ದೇವೆ, ಇದು ಸವಾಲಿನ ಮತ್ತು ಸೂಕ್ಷ್ಮವಾದ ನೈತಿಕತೆ ಮತ್ತು ಅನುಸರಣೆ ಸಮಸ್ಯೆಗಳೊಂದಿಗೆ ಬರುತ್ತದೆ. ಸಮಗ್ರತೆಯಿಂದ ವರ್ತಿಸುವ ಮೂಲಕ ಮತ್ತು ಮಾತನಾಡುವ ಮೂಲಕ ಪ್ರತಿದಿನ ನಿಮ್ಮ ಜವಾಬ್ದಾರಿ ವಹಿಸಿದ್ದಕ್ಕಾಗಿ ಧನ್ಯವಾದಗಳು. ನಿಮ್ಮ ಬದ್ಧತೆಯೇ ನಮ್ಮ ಸತತ ಯಶಸ್ಸಿಗೆ ಪ್ರೇರಣೆ - ಇದು ನಮ್ಮನ್ನು ಒಂದೇ ದಿಕ್ಕಿನಲ್ಲಿ ಚಲಿಸುವಂತೆ ಮಾಡುತ್ತಿದೆ. ಮುಂದಕ್ಕೆ. ಎಲ್ಲರಿಗೂ.

ಜೋನ್ನೆ ಹೋರಿಬ್
ಉಪಾಧ್ಯಕ್ಷರು, ನೈತಿಕತೆ ಮತ್ತು ಮುಖ್ಯ ಅನುಸರಣೆ ಅಧಿಕಾರಿ



# ಪರಿವಿಡಿ


CEO ಅವರಿಂದ ಸಂದೇಶ....2
CCO ಅವರಿಂದ ಸಂದೇಶ....3
ಪರಿಚಯ....6
ಕಾಣ್ಕೆ I ಗುರಿ I ಮೌಲ್ಯಗಳು....8
ಜವಾಬ್ದಾರಿಗಳು....9
ನಮ್ಮ ಗ್ರಾಹಕರು/ಮಾರುಕಟ್ಟೆ ಸ್ಥಳ....11
- ಸಮಗ್ರತೆ, ನ್ಯಾಯಸಮ್ಮತತೆ ಮತ್ತು ಗೌರವದೊಂದಿಗೆ ವ್ಯವಹಾರ ನಡೆಸುವುದು....11
- ವಿರೋಧಿ ಮತ್ತು ಸ್ಪರ್ಧೆಯ ಕಾನೂನುಗಳ ಅನುಸರಣೆ....11
- ಲಂಚ-ವಿರೋಧಿ ಕಾನೂನುಗಳ ಅನುಸರಣೆ....11
- ಗುಂಪುಕಟ್ಟುವಿಕೆ ಮತ್ತು ರಾಜಕೀಯ ಮಾಡುವುದು....12

ನಮ್ಮ ಷೇರುದಾರರು / ಹೂಡಿಕೆದಾರರು....14
- ಹಣಕಾಸು ವರದಿ....14
- ಅಸಮರ್ಪಕ ಸೆಕ್ಯುರಿಟೀಸ್ ಟ್ರೇಡಿಂಗ್....14
- ಸಾರ್ವಜನಿಕ ಪ್ರಕಟಣೆಗಳು....15

ನಮ್ಮ ಉದ್ಯೋಗಿಗಳು....16
- ಪರಿಸರ ಮತ್ತು ಔದ್ಯೋಗಿಕ ಆರೋಗ್ಯ ಮತ್ತು ಸುರಕ್ಷತೆ....16
- ವೈಯಕ್ತಿಕ ಮಾಹಿತಿಯ ರಕ್ಷಣೆ....16
- ವೈವಿಧ್ಯತೆ ಮತ್ತು ಸೇರ್ಪಡೆ....17
- ಎಚ್ಚರಿಕೆಯ ಸಂವಹನ....18
- ಮ್ಯಾಗ್ನ ಹಾಟ್‌ಲೈನ್....18
- ಗೌಪ್ಯ ಮಾಹಿತಿಯ ಬಳಕೆ....20
- ಹೂಡಿಕೆಗಳು ಮತ್ತು ಕಾರ್ಪೊರೇಟ್ ಅವಕಾಶಗಳು....20
- ಸಂಬಂಧಿಗಳು ಅಥವಾ ಸ್ನೇಹಿತರೊಂದಿಗೆ ಸ್ವಯಂ-ವ್ಯವಹರಣೆ ಮತ್ತು ಸಂವಹನ....21
- ಹೊರಗಿನ ಸ್ಥಾನಗಳು....21
- ಉಡುಗೊರೆಗಳು ಮತ್ತು ಮನರಂಜನೆ....21

ಹೆಚ್ಚುವರಿ ಸಂಪನ್ಮೂಲಗಳು....23
ಪದಕೋಶ....24

# ಪರಿಚಯ

ನಾವೆಲ್ಲರೂ ನಮ್ಮ ಕಾರ್ಪೊರೇಟ್ ನೀತಿಗಳಿಗೆ ಅನುಗುಣವಾಗುವ ರೀತಿಯಲ್ಲಿ ಹಾಗೂ ನೈತಿಕವಾಗಿ ವ್ಯವಹಾರ ನಡೆಸುವಲ್ಲಿ ನಮ್ಮ ಜವಾಬ್ದಾರಿಯನ್ನು ಅರ್ಥಮಾಡಿಕೊಳ್ಳುವುದು ಮುಖ್ಯವಾಗಿದೆ.

ಇಂದು, ಚಲನಶೀಲತೆಯ ಹೆಚ್ಚು ಸಂಕೀರ್ಣ ಮತ್ತು ಸವಾಲಿನದ್ದಾಗಿ ಮುಂದುವರಿಯುತ್ತಿರುವಾಗ ನಾವೆಲ್ಲರೂ ನಮ್ಮ ಕಾರ್ಪೊರೇಟ್ ನೀತಿಗಳಿಗೆ ಅನುಗುಣವಾಗುವ ರೀತಿಯಲ್ಲಿ ಹಾಗೂ ನೈತಿಕವಾಗಿ ವ್ಯವಹಾರ ನಡೆಸುವಲ್ಲಿ ನಮ್ಮ ಜವಾಬ್ದಾರಿಯನ್ನು ಅರ್ಥಮಾಡಿಕೊಳ್ಳುವುದು ಮುಖ್ಯವಾಗಿದೆ.  ನಮ್ಮ ನಡಾವಳಿ ಮತ್ತು ನೈತಿಕತೆಯ ನೀತಿಯು ("ಕೋಡ್") ನಮ್ಮ ನೈತಿಕ ಮಾನದಂಡಗಳನ್ನು ಕಾಪಾಡಿಕೊಳ್ಳಲು ಸಹಾಯ ಮಾಡುವ ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸುತ್ತದೆ.

ನಾವು ಪ್ರತಿಯೊಬ್ಬ ಉದ್ಯೋಗಿಯು ಅನ್ವಯವಾಗುವ ಕಾನೂನಿಗೆ ಅನುಸಾರವಾಗಿ ಮತ್ತು ನಮ್ಮ ಪ್ರಮುಖ ಮೌಲ್ಯಗಳು ಹಾಗೂ ವ್ಯವಹಾರ ತತ್ವಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸಬೇಕೆಂದು ನಿರೀಕ್ಷಿಸುತ್ತೇವೆ ಮತ್ತು ಅದು ನಮ್ಮ ಅವಶ್ಯಕತೆಯಾಗಿದೆ. ನಮ್ಮ ಪೂರೈಕೆದಾರರು, ಸಲಹೆಗಾರರು, ಸ್ವತಂತ್ರ ಗುತ್ತಿಗೆದಾರರು, ಏಜೆಂಟ್‌ಗಳು ಮತ್ತು ಇತರ ಪ್ರತಿನಿಧಿಗಳು ಈ ಮಾನದಂಡಗಳನ್ನು ಪೂರೈಸಬೇಕು ಎಂಬುದೂ ನಮ್ಮ ನಿರೀಕ್ಷೆಯಾಗಿದೆ. ಈ ನಡಾವಳಿಯ ಉಲ್ಲಂಘನೆಯು ಉದ್ಯೋಗಿಗಳ ಮೇಲೆ ವಜಾಗೊಳಿಸುವಿಕೆ ಸೇರಿದಂತೆ ಶಿಸ್ತಿನ ಕ್ರಮ ಕೈಗೊಳ್ಳುವುದಕ್ಕೆ ಕಾರಣವಾಗುತ್ತದೆ.

ಈ ಮಾನದಂಡವು ಕೆಳಗಿನ ಅಂಶಗಳಿಗೆ ಅನ್ವಯಯವಾಗುತ್ತದೆ. ನಾವು ಹೇಗೆ,

- ಕೆಲಸದ ಸ್ಥಳದಲ್ಲಿ ಇನ್ನೊಬ್ಬರೊಂದಿಗೆ ನಡೆದುಕೊಳ್ಳುತ್ತೇವೆ;
- ನಮ್ಮ ಪರಿಸರದ ಜವಾಬ್ದಾರಿಗಳನ್ನು ನಿರ್ವಹಿಸುತ್ತೇವೆ;
- ನಮ್ಮ ಸ್ಪರ್ಧಿಗಳ ಜೊತೆಗೆ ತೊಡಗುತ್ತೇವೆ;
- ಸರ್ಕಾರಿ ಅಧಿಕಾರಿಗಳೊಂದಿಗೆ ಮಾತನಾಡುತ್ತೇವೆ; ಹಾಗೂ
- ನಮ್ಮ ಮತ್ತು ನಮ್ಮ ಗ್ರಾಹಕರ ಗೌಪ್ಯ ಮಾಹಿತಿಯನ್ನು ರಕ್ಷಿಸುತ್ತೇವೆ.

ನಮ್ಮಲ್ಲಿ ಪ್ರತಿಯೊಬ್ಬರೂ ಪ್ರಾಮಾಣಿಕತೆ ಮತ್ತು ಸಮಗ್ರತೆಯೊಂದಿಗೆ ಕಾರ್ಯನಿರ್ವಹಿಸಲು ಮತ್ತು ಎಲ್ಲಾ ಸಮಯದಲ್ಲೂ ನೈತಿಕ ಆಯ್ಕೆಗಳನ್ನೇ ಮಾಡಲು ಜವಾಬ್ದಾರರಾಗಿರುತ್ತಾರೆ. ಅದು ನಮ್ಮ ಕೆಲಸದ ಪ್ರಮುಖ ಭಾಗ. ನಮ್ಮ ನೈತಿಕತೆ ಮತ್ತು ಕಾನೂನು ಅನುಸರಣೆ ತಂಡವು ಈ ಕ್ಷೇತ್ರದಲ್ಲಿ ಯಶಸ್ವಿಯಾಗಲು ನಮಗೆ ಅಗತ್ಯವಿರುವ ತರಬೇತಿ ಮತ್ತು ನಿರಂತರ ಬೆಂಬಲವನ್ನು ಒದಗಿಸಲು ಬದ್ಧವಾಗಿದೆ.

ನಮ್ಮ ನಡಾವಳಿಯು ದೈನಂದಿನ ಕಚೇರಿಯ ಮುಖಾಮುಖಿಗಳು, ಎಲ್ಲರೂ ಭಾಗಿಯಾಗಿರುವ ಆನ್‌ಲೈನ್ ಸ್ಥಳಗಳು, ಸಾಮಾಜಿಕ ಮಾಧ್ಯಮ, ಸಮ್ಮೇಳನಗಳು ಮತ್ತು ನಾವು ಮ್ಯಾಗ್ನವನ್ನು ಪ್ರತಿನಿಧಿಸುವ ಇತರ ಕಾರ್ಯಕ್ರಮಗಳು ಸೇರಿದಂತೆ ನಮ್ಮ ಹಂಚಿಕೆಯ ವೃತ್ತಿಪರ ಜೀವನದ ಎಲ್ಲ ಸಂವಹನಗಳಿಗೆ ಅನ್ವಯಿಸುತ್ತದೆ.

ಮ್ಯಾಗ್ನ ಉದ್ಯೋಗಿಗಳಾಗಿ ನಮ್ಮ ಕರ್ತವ್ಯಗಳನ್ನು ನಿರ್ವಹಿಸಲು ನಮಗೆ ಮಾರ್ಗದರ್ಶನ ನೀಡಲು ಈ ನಡಾವಳಿಯನ್ನು ಒಂದು ಸಂಪನ್ಮೂಲವಾಗಿ ಒದಗಿಸಲಾಗಿದೆ ಮತ್ತು ಇದು ಸ್ಥಳೀಯ ಮತ್ತು ಅಂತರರಾಷ್ಟ್ರೀಯ ಕಾನೂನುಗಳ ಅನುಸರಣೆ ಮಾಡಲು ಬೇಕಾದ ಅಂಶಗಳನ್ನು ಒಳಗೊಂಡಿದೆ.

**Q. ನಾನೊಬ್ಬ ಮ್ಯಾಗ್ನ ಉದ್ಯೋಗಿ ಈ ನಡಾವಳಿ ಮತ್ತು ನೈತಿಕತೆಯ ನೀತಿಯು ನನಗೆ ಅನ್ವಯವಾಗುತ್ತದೆಯೇ?**

*A. ಹೌದು. ನಡಾವಳಿಯು ಮ್ಯಾಗ್ನ ಇಂಟರ್‌ನ್ಯಾಶನಲ್ ಇಂಕ್‌ನ ಎಲ್ಲಾ ಉದ್ಯೋಗಿಗಳಿಗೆ (ಪೂರ್ಣ ಸಮಯ ಮತ್ತು ಅರೆಕಾಲಿಕ ಉದ್ಯೋಗಿಗಳನ್ನು ಒಳಗೊಂಡಂತೆ) ಮತ್ತು ಅದರ ಎಲ್ಲಾ ಕಾರ್ಯಾಚರಣಾ ಗುಂಪುಗಳು, ವಿಭಾಗಗಳು, ಜಂಟಿ ಉದ್ಯಮಗಳು ಮತ್ತು ಜಾಗತಿಕವಾಗಿ ಇತರ ಕಾರ್ಯಾಚರಣೆಗಳಿಗೆ ಅನ್ವಯಿಸುತ್ತದೆ. ಇದು ನಮ್ಮ ಎಲ್ಲಾ ಮಂಡಳಿಯ ನಿರ್ದೇಶಕರು ಮತ್ತು ಅಧಿಕಾರಿಗಳಿಗೆ ಅನ್ವಯಿಸುತ್ತದೆ.*

**Q. ನಾನು ಮ್ಯಾಗ್ನಗೆ ಒಬ್ಬ ಪೂರೈಕೆದಾರ. ಈ ನಡಾವಳಿಯು ನನಗೆ ಅನ್ವಯಿಸುತ್ತದೆಯೇ?**

*A. ಪೂರೈಕೆದಾರರು, ಸಲಹೆಗಾರರು, ಸ್ವತಂತ್ರ ಗುತ್ತಿಗೆದಾರರು, ಏಜೆಂಟ್‌ಗಳು ಮತ್ತು ಇತರ ಪ್ರತಿನಿಧಿಗಳಂತಹ ನಮ್ಮ ಪರವಾಗಿ ಕಾರ್ಯನಿರ್ವಹಿಸುವ ಯಾರಾದರೂ **ಪೂರೈಕೆದಾರರ ನೈತಿಕತೆಯ ನೀತಿ** ಯಲ್ಲಿನ ಅವಶ್ಯಕತೆಗಳನ್ನು ಪೂರೈಸುವ ಅಗತ್ಯವಿದೆ, ಇದು ಈ ನಡಾವಳಿಯಲ್ಲಿ ಕಂಡುಬರುವ ಮಾನದಂಡಗಳನ್ನು ಹೋಲುತ್ತದೆ.*

**Q. ನಾನು ಈ ಕೋಡ್ ಅನ್ನು ಉಲ್ಲಂಘಿಸಿದರೆ ಅದರ ಪರಿಣಾಮಗಳೇನು?**

*A. ನಾವು ಈ ನಡಾವಳಿಯ ಮೌಲ್ಯಗಳಿಗೆ ಆಳವಾಗಿ ಬದ್ಧರಾಗಿದ್ದೇವೆ ಮತ್ತು ಈ ಬದ್ಧತೆಗಳನ್ನು ಎತ್ತಿಹಿಡಿಯುವಲ್ಲಿ ಯಾರಾದರೂ ವಿಫಲರಾದರೆ ಅದನ್ನು ಗಂಭೀರವಾಗಿ ಪರಿಗಣಿಸುತ್ತೇವೆ. ಈ ನಡಾವಳಿಯ ಉಲ್ಲಂಘನೆಯು ಶಿಸ್ತಿನ ಕ್ರಮಕ್ಕೆ ಕಾರಣವಾಗುತ್ತದೆ. ಶಿಕ್ಷೆಯ ಪ್ರಕಾರವು ಉಲ್ಲಂಘನೆಯ ತೀವ್ರತೆಯನ್ನು ಅವಲಂಬಿಸಿರುತ್ತದೆ ಮತ್ತು ಗಂಭೀರ ಪ್ರಕರಣಗಳಲ್ಲಿ ಉದ್ಯೋಗದಿಂದ ವಜಾಗೊಳಿಸುವಿಕೆಯನ್ನೂ ಒಳಗೊಂಡಿರಬಹುದು.*

ನಮ್ಮ ಪೂರೈಕೆದಾರರು, ಸಲಹೆಗಾರರು, ಸ್ವತಂತ್ರ ಗುತ್ತಿಗೆದಾರರು, ಏಜೆಂಟ್‌ಗಳು ಅಥವಾ ನಮ್ಮ ಉದ್ಯೋಗಿಗಳಿಂದ ನಿರೀಕ್ಷಿತ ನೈತಿಕ ಮಾನದಂಡಗಳನ್ನು ಪೂರೈಸಲು ವಿಫಲರಾದ ಇತರ ಪ್ರತಿನಿಧಿಗಳಿಗೂ ಕೂಡ ಪರಿಣಾಮಗಳು ಒಂದೇ ಆಗಿರುತ್ತವೆ. ಉಲ್ಲಂಘನೆಯು ಗಂಭೀರವಾಗಿದ್ದರೆ, ಥರ್ಡ್ ಪಾರ್ಟಿಯೊಂದಿಗೆ ನಾವು ನಮ್ಮ ಸಂಬಂಧವನ್ನು ಕೊನೆಗೊಳಿಸಬಹುದು.

ಈ ನಡಾವಳಿಯ ಕೆಲವು ವಿಭಾಗಗಳು ಜಾರಿಯಲ್ಲಿರುವ ಕಾನೂನು ಅವಶ್ಯಕತೆಗಳನ್ನು ಪ್ರತಿಬಿಂಬಿಸುತ್ತವೆ ಎಂಬುದನ್ನೂ ಸಹ ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಅಂದರೆ ಕೆಲವು ಸಂದರ್ಭಗಳಲ್ಲಿ ನಮ್ಮ ನಡಾವಳಿಯನ್ನು ಉಲ್ಲಂಘಿಸುವುದು ಕಾನೂನನ್ನು ಉಲ್ಲಂಘಿಸಿದಂತೆ ಈ ಸಂದರ್ಭಗಳಲ್ಲಿ, ಶಿಕ್ಷೆಯು ದಂಡ ಅಥವಾ ಜೈಲು ಶಿಕ್ಷೆಯನ್ನು ಒಳಗೊಂಡಿರಬಹುದು.

*ಈ ಡಾಕ್ಯುಮೆಂಟ್‌ನಾದ್ಯಂತ ಒದಗಿಸಲಾದ ಪ್ರಶ್ನೆಗಳು ಮತ್ತು ಉದಾಹರಣೆಗಳು ಕೇವಲ ವಿವರಣಾತ್ಮಕವಾಗಿವೆ ಹಾಗೂ ಇವು ನೈಜ ಘಟನೆಗಳನ್ನು ವಿವರಿಸುವುದಿಲ್ಲ ಮತ್ತು ನಮ್ಮ ನಡಾವಳಿ ಹಾಗೂ ನೈತಿಕತೆಯ ನೀತಿಯ ಅಡಿಯಲ್ಲಿ ಉದ್ಭವಿಸಬಹುದಾದ ಎಲ್ಲಾ ಅಥವಾ ಅತ್ಯಂತ ಗಂಭೀರವಾದ ಪ್ರಕರಣಗಳನ್ನು ಸೆರೆಹಿಡಿಯುವ ಉದ್ದೇಶವನ್ನು ಹೊಂದಿಲ್ಲ ಎಂಬುದನ್ನು ದಯವಿಟ್ಟು ಗಮನಿಸಿ.*

# ದೂರದೃಷ್ಟಿ 1 ಗುರಿ 1 ಮೌಲ್ಯಗಳು

## ನಮ್ಮ ದೃಷ್ಟಿಕೋನ

ಎಲ್ಲರಿಗೂ ಮತ್ತು ಎಲ್ಲದಕ್ಕೂ ಚಲನಶೀಲತೆಯನ್ನು ಹೆಚ್ಚಿಸುವುದು.

## ನಮ್ಮ ಗುರಿ

ಚಲನಶೀಲತೆಯಿಂದ ಕೂಡಿದ ಉತ್ತಮ ಜಗತ್ತನ್ನು ಜವಾಬ್ದಾರಿಯುತವಾಗಿ ರಚಿಸಲು ನಮ್ಮ ಪರಿಣತಿಯನ್ನು ಬಳಸುವುದು ನಮ್ಮ ಗುರಿಯಾಗಿದೆ. ನಾವಿದನ್ನು ವಾಹನಗಳನ್ನು ಸುರಕ್ಷಿತ ಮತ್ತು ಸ್ವಚ್ಛವಾಗಿಸುವ ತಂತ್ರಜ್ಞಾನಗಳು, ವ್ಯವಸ್ಥೆಗಳು ಮತ್ತು ಪರಿಕಲ್ಪನೆಗಳನ್ನು ಅಭಿವೃದ್ಧಿಪಡಿಸುವ ಮೂಲಕ ಸಾಧಿಸುತ್ತೇವೆ.

## ಪ್ರಮುಖ ಮೌಲ್ಯಗಳು

ನಮ್ಮ ಎಂಪ್ಲಾಯೀ ಚಾರ್ಟರ್ ಮಾರ್ಗದರ್ಶನದಲ್ಲಿ, ನಮ್ಮ ಪ್ರಮುಖ ಮೌಲ್ಯಗಳು ನಾವು ವ್ಯಕ್ತಿಗಳಾಗಿ ಮತ್ತು ಕಂಪನಿಯಾಗಿ ಯಾರೆಂಬುದನ್ನು ಪ್ರತಿಬಿಂಬಿಸುತ್ತವೆ.

## ದೊಡ್ಡದಾಗಿ ಯೋಚಿಸಿ

ಪ್ರತಿಯೊಬ್ಬರಿಗೂ ಆತ್ಮವಿಶ್ವಾಸದಿಂದ ಕಾರ್ಯನಿರ್ವಹಿಸಲು ಅಧಿಕಾರ ನೀಡುವುದು.

## ಜವಾಬ್ದಾರಿ ತೆಗೆದುಕೊಳ್ಳಿ

ನಮ್ಮ ಕಾರ್ಯಗಳು ಮತ್ತು ಬದ್ಧತೆಗಳಲ್ಲಿ ನಮಗಾಗಿ ಮತ್ತು ಇತರರಿಗೆ ಹೊಣೆಗಾರಿಕೆಯನ್ನು ತೆಗೆದುಕೊಳ್ಳುವುದು.

## ಎಂದಿಗೂ ನಿಲ್ಲಬೇಡಿ

ನಿರಂತರವಾಗಿ ಹೊಸತನ, ಸುಧಾರಣೆ ಮತ್ತು ಸರಿಯಾದ ಪ್ರಶ್ನೆಗಳನ್ನು ಕೇಳುವುದು.

## ಸಹಕಾರಿಯಾಗಿರಿ

ಯಾವುದೇ ಕೆಲಸವನ್ನು ನಾವು ಗೌರವದಿಂದ ಹಾಗೂ ವಿನಯದಿಂದ ಒಟ್ಟಿಗೆ ಮಾಡಿದಾಗ ಅದನ್ನು ಅತ್ಯುತ್ತಮವಾಗಿ ಮಾಡಲು ಸಾಧ್ಯವಾಗುತ್ತದೆ.

# ಜವಾಬ್ದಾರಿಗಳು

ಜೀವನದ ತುಂಬಾ ಅನೇಕ ಆಯ್ಕೆಗಳು ಎದುರಾಗುತ್ತವೆ. ಪ್ರತಿದಿನ ಕಣ್ಣು ಮಿಟುಕಿಸುವಷ್ಟರಲ್ಲಿ ನಾವು ಅನೇಕ ಆಯ್ಕೆಗಳನ್ನು ಮಾಡಿಕೊಳ್ಳುತ್ತೇವೆ.

ಆದರೆ ಕೆಲವು ಆಯ್ಕೆಗಳು ಬೇರೆಯವುಗಳಿಗಿಂತ ಹೆಚ್ಚು ಮುಖ್ಯವಾಗಿರುತ್ತವೆ. ಮತ್ತು ಮ್ಯಾಗ್ನವನ್ನು ಪ್ರತಿನಿಧಿಸುವಾಗ ನಾವು ಮಾಡುವ ಆಯ್ಕೆಗಳು ಒಟ್ಟಾರೆಯಾಗಿ ಕಂಪನಿಯನ್ನು ಮತ್ತು ನಮ್ಮನ್ನು ಪ್ರತಿಫಲಿಸುತ್ತವೆ.

ಸಂಕ್ಷಿಪ್ತವಾಗಿ, ನಮ್ಮ ಆಯ್ಕೆಗಳು ಸಮಗ್ರತೆಯನ್ನು ಹೆಚ್ಚಿಸುತ್ತವೆ.

ಕೆಲಸದ ಸ್ಥಳದಲ್ಲಿ ಉತ್ತಮ ಆಯ್ಕೆಗಳನ್ನು ಮಾಡಲು ನಮಗೆ ಮಾರ್ಗದರ್ಶನ ನೀಡಲು ನಡಾವಳಿ ಮತ್ತು ನೈತಿಕತೆಯ ನೀತಿಯನ್ನು ಹೊಂದಿದ್ದೇವೆ. ಈ ನಡಾವಳಿಯು ಕಾರ್ಪೊರೇಟ್ ಮತ್ತು ಗುಂಪು ಕಚೇರಿಗಳು, ಉತ್ಪಾದನಾ ವಿಭಾಗಗಳು ಮತ್ತು ಜಂಟಿ ಉದ್ಯಮಗಳು ಸೇರಿದಂತೆ ಜಾಗತಿಕವಾಗಿ ಎಲ್ಲಾ ಮ್ಯಾಗ್ನ ಉದ್ಯೋಗಿಗಳಿಗೆ ಅನ್ವಯಿಸುತ್ತದೆ.

ಎಲ್ಲಾ ಉದ್ಯೋಗಿಗಳು ನಮ್ಮ ನಡಾವಳಿಯನ್ನು ಓದಬೇಕು, ಅರ್ಥಮಾಡಿಕೊಳ್ಳಬೇಕು ಮತ್ತು ಯಾವಾಗಲೂ ನೈತಿಕ ಮತ್ತು ಪ್ರಾಮಾಣಿಕ ರೀತಿಯಲ್ಲಿ ಕಾರ್ಯನಿರ್ವಹಿಸಬೇಕು ಎಂಬುದು ನಮ್ಮ ನೀರಿಕ್ಷೆ. ಸರಿಯಾದ ಆಯ್ಕೆಗಳನ್ನು ಮಾಡುವುದು ಮತ್ತು ನಮ್ಮ ವ್ಯವಹಾರವನ್ನು ನಿಯಂತ್ರಿಸುವ ಕಾನೂನುಗಳು ಮತ್ತು ನಿಬಂಧನೆಗಳನ್ನು ಅನುಸರಿಸುವುದು ನಮ್ಮ ಯಶಸ್ಸಿಗೆ ಈಗ ಮತ್ತು ಭವಿಷ್ಯದಲ್ಲಿ ಅತ್ಯಂತ ಮುಖ್ಯವಾಗಿದೆ.

## ನಾವು ಏನು ಮಾಡಬಹುದು

ಸಂಸ್ಥೆಯಾದ್ಯಂತ ಸಮಗ್ರತೆಯನ್ನು ಹೆಚ್ಚಿಸಲು ನಾವು ಎಲ್ಲಾ ಉದ್ಯೋಗಿಗಳ ಮೇಲೆ ಅವಲಂಬಿತರಾಗಿದ್ದೇವೆ. ನಾವು:

- ನಮ್ಮ ಕೋಡ್ ಮತ್ತು ಸಂಬಂಧಿತ ಅನುಸರಣೆ ನೀತಿಗಳನ್ನು ತಿಳಿದುಕೊಳ್ಳಬೇಕು
- ಈ ನಡಾವಳಿಯ ಸಂಭವನೀಯ ಉಲ್ಲಂಘನೆಯಾಗಿದೆ ಎಂದು ಭಾವಿಸಿದರೆ ಅಥವಾ ನಡಾವಳಿಯ ಬಗ್ಗೆ ಪ್ರಶ್ನೆ ಇದ್ದರೆ ಮಾತನಾಡಬೇಕು
- ಪ್ರತಿದಿನ ನಮ್ಮ ನಡಾವಳಿಯನ್ನು ರೂಪಿಸುವ ಮೂಲ ತತ್ವಗಳನ್ನು ಜೀವಿಸಬೇಕು

ನಾವು ಈ ಕೆಳಗಿನಂತೆ ಹೇಳುವುದರ ಅರ್ಥ ಇದೆ. ತಿಳಿಯಿರಿ. ಮಾತನಾಡಿ. ಪಾಲಿಸಿ. ಮ್ಯಾಗ್ನದ ಯಶಸ್ಸು ನಾವೆಲ್ಲರೂ ನಮ್ಮ ವ್ಯವಹಾರವನ್ನು ನೈತಿಕತೆಯಿಂದ ಮಾಡುವಂತೆ ನೋಡಕೊಳ್ಳುವಲ್ಲಿ ಸಕ್ರೀಯವಾಗಿ ತೊಡಗಿಸಿಕೊಳ್ಳುತ್ತೇವೆ ಎಂಬುದರ ಮೇಲೆ ನಿಂತಿದೆ.

## ನಮ್ಮ ನಾಯಕರ ನಿರೀಕ್ಷೆಗಳು

ಕಂಪನಿಯ ನಾಯಕರಾಗಿ, ನಮ್ಮ ಕಾರ್ಯನಿರ್ವಾಹಕರು, ಹಿರಿಯ ಅಧಿಕಾರಿಗಳು ಮತ್ತು ಮ್ಯಾನೇಜರ್‌ಗಳು ತಮಗಾಗಿ ಅತ್ಯುನ್ನತ ನೈತಿಕ ಮಾನದಂಡವನ್ನು ಅನುಸರಿಸುವ ನಿರೀಕ್ಷೆಯಿದೆ, ಪ್ರತಿಯಾಗಿ ಅವರ ತಂಡಗಳು ಅನುಸರಿಸಲು ಒಂದು ಉತ್ತಮ ನಿದರ್ಶನ ರೂಪಿಸಿದಂತಾಗುತ್ತದೆ. ನಮ್ಮ ನಾಯಕರು ಈ ನಡಾವಳಿಯ ಯಾವುದೇ ಸಂಭಾವ್ಯ ಉಲ್ಲಂಘನೆಗಳ ಬಗ್ಗೆ ಕಾರ್ಯತತ್ಪರತೆ ಮತ್ತು ಎಚ್ಚರಿಕೆ ಹೊಂದಿರಬೇಕು ಹಾಗೂ ಸಕಾಲಕ್ಕೆ ಇದನ್ನು ಕುರಿತ ಸಮಸ್ಯೆಗಳನ್ನು ವರದಿ ಮಾಡಬೇಕು. ಅನುಸರಣೆಗೆ ಸಂಬಂಧಪಟ್ಟ ಸಮಸ್ಯೆಗಳನ್ನು ವರದಿ ಮಾಡಲು ಉದ್ಯೋಗಿಗಳಿಗೆ ಸೂಕ್ತ ವಾತಾವರಣವನ್ನೂ ನಮ್ಮ ನಾಯಕರು ಕಲ್ಪಿಸಿಕೊಡಬೇಕು ಈ ನಡಾವಳಿಯಲ್ಲಿ ವಿವರಿಸಿರುವ ಹಾಗೆ ಕಂಪನಿಯುದ್ದಕ್ಕೂ ನಡವಳಿಕೆಯ ಮಾನದಂಡಗಳನ್ನು ಸ್ಥಾಪಿಸುವಲ್ಲಿ ಮತ್ತು ನಿರ್ವಹಿಸುವಲ್ಲಿ ಉದಾಹರಣೆಯ ಮೂಲಕ ನಾಯಕತ್ವ ವಹಿಸುವುದು ಅತ್ಯಂತ ಪ್ರಮುಖವಾಗಿದೆ

ಪ್ರಾಮಾಣಿಕವಾಗಿ ಮತ್ತು ಉತ್ತಮ ನಂಬಿಕೆಯಿಂದ ಸಮಸ್ಯೆಯನ್ನು ವರದಿ ಮಾಡುವ ಯಾವುದೇ ಉದ್ಯೋಗಿಯ ವಿರುದ್ಧ ಯಾವುದೇ ಪ್ರತೀಕಾರವಿಲ್ಲ ಎಂದು ಖಚಿತಪಡಿಸಿಕೊಳ್ಳುವಲ್ಲಿ ನಾಯಕರು ನಿರ್ಣಾಯಕ ಪಾತ್ರವನ್ನು ವಹಿಸುತ್ತಾರೆ. ಈ ರೀತಿಯ ಪ್ರತೀಕಾರವನ್ನು ನಮ್ಮ **ಪ್ರತಿಕಾರ-ವಿರೋಧಿ ನೀತಿ** ಮೂಲಕ ಸ್ಪಷ್ಟವಾಗಿ ನಿಷೇಧಿಸಲಾಗಿದೆ.

ಪ್ರತೀಕಾರವು ಹಲವು ರೂಪಗಳನ್ನು ತೆಗೆದುಕೊಳ್ಳಬಹುದು ಮತ್ತು ಅದು ಸೂಕ್ಷ್ಮ ಕ್ರಮಗಳನ್ನೂ ಒಳಗೊಂಡಿರಬಹುದು, ಇದು ಕೆಲಸದ ಅವಧಿ ಅಥವಾ ವೇತನವನ್ನು ಕಡಿತಗೊಳಿಸುವುದು, ವಜಾಗೊಳಿಸುವುದು, ಹುದ್ದೆಯಿಂದ ಕೆಳಗಿಳಿಸುವುದು, ಅಮಾನತು, ಬೆದರಿಕೆ, ಕಿರುಕುಳ, ನಿಂದನೆ, ಮುಜುಗರ, ಅವಮಾನ ಅಥವಾ ಅವಕಾಶಗಳನ್ನು ನಿರಾಕರಿಸುವುದು (ಉದಾಹರಣೆಗೆ ಬಡ್ತಿ, ವೇತನ ಹೆಚ್ಚಳ, ಅಥವಾ ಅಧಿಕಾವಧಿ) ಹೆಚ್ಚಿನ ಮಾಹಿತಿಗಾಗಿ, ದಯವಿಟ್ಟು ನಮ್ಮ ***ಪ್ರತಿಕಾರ-ವಿರೋಧಿ ನೀತಿ*** ಯನ್ನು ನೋಡಿ.

***Q: ನನ್ನ ಮೇಲ್ವಿಚಾರಕರು ನಮ್ಮ ನಡ್ವವಳಿಯನ್ನು ಉಲ್ಲಂಘಿಸುತ್ತಿರಬಹುದು ಎನಿಸುತ್ತಿದೆ. ಆದರೆ ಅವರ ನಡವಳಿಕೆಯನ್ನು ವರದಿ ಮಾಡುವುದು ನನ್ನ ಉದ್ಯೋಗದ ಮೇಲೆ ನಕಾರಾತ್ಮಕ ಪರಿಣಾಮ ಬೀರಬಹುದು ಎಂಬುದು ನನ್ನ ಚಿಂತೆ. ಮೇಲ್ವಿಚಾರಕರ ನಡವಳಿಕೆಯನ್ನು ನಾನು ವರದಿ ಮಾಡಿರುವುದು ಎಂದು ಅವರಿಗೆ ತಿಳಿದರೆ ಮ್ಯಾಗ್ನ ನನ್ನನ್ನು ರಕ್ಷಿಸುವುದೆ?***

*A: ಹೌದು. ನಮ್ಮ* ***ಪ್ರತಿಕಾರ-ವಿರೋಧಿ ನೀತಿ*** *ಮೇಲ್ವಿಚಾರಕರು ಉದ್ಯೋಗಿಗಳ ವಿರುದ್ಧ ಪ್ರತೀಕಾರದ ಕ್ರಮ ತೆಗೆದುಕೊಳ್ಳುವುದನ್ನು ನಿಷೇಧಿಸುತ್ತದೆ ಮತ್ತು ಸಮಸ್ಯೆಗಳನ್ನು ಪ್ರಾಮಾಣಿಕವಾಗಿ ಮತ್ತು ಉತ್ತಮ ನಂಬಿಕೆಯಿಂದ ವರದಿ ಮಾಡುವ ಉದ್ಯೋಗಿಗಳನ್ನು ರಕ್ಷಿಸುತ್ತದೆ.*

***Q: ಉತ್ತಮ ನಂಬಿಕೆಯಿಂದ ಸಮಸ್ಯೆಯನ್ನು ವರದಿ ಮಾಡಿದ ನಂತರ ನನ್ನ ಉದ್ಯೋಗದಿಂದ ನನ್ನನ್ನು ವಜಾಗೊಳಿಸಿದರೆ ಪ್ರತೀಕಾರ-ವಿರೋಧಿ ನೀತಿಯು ಅನ್ವಯಿಸುತ್ತದೆಯೇ?***

*A: ಹೌದು, ಪ್ರತೀಕಾರವು ವಜಾ ರೂಪವನ್ನು ತೆಗೆದುಕೊಳ್ಳಬಹುದು. ಆದರೆ ಇದು ಇತರ(ಸೂಕ್ಷ್ಮ ಸೇರಿದಂತೆ) ಪ್ರಕಾರದ ಕ್ರಮಗಳನ್ನೂ ತೆಗೆದುಕೊಳ್ಳಬಹುದು ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ನಮ್ಮ* ***ಪ್ರತಿಕಾರ-ವಿರೋಧಿ ನೀತಿ*** *ಯನ್ನು ನೋಡಿ.*

# ನಮ್ಮ ಗ್ರಾಹಕರು/ಮಾರುಕಟ್ಟೆ ಸ್ಥಳ

## ಸಮಗ್ರತೆ, ನ್ಯಾಯಸಮ್ಮತತೆ ಮತ್ತು ಗೌರವದಿಂದ ವ್ಯವಹಾರ ನಡೆಸುವುದು

ಮ್ಯಾಗ್ನದ ಯಶಸ್ಸು ತರುವ ಜವಾಬ್ದಾರಿಯಲ್ಲಿ ನಾವೆಲ್ಲರೂ, ಉದ್ಯೋಗಿಗಳು ಮತ್ತು ನಿರ್ವಹಣಾ ತಂಡವು ಸಮಪಾಲು ವಹಿಸುತ್ತೇವೆ ಎಂಬುದು ನಮ್ಮ ಕಾರ್ಯಾಚರಣೆಯ ತತ್ವವಾಗಿದೆ.

ಈ ಜವಾಬ್ದಾರಿಯನ್ನು ನಿಭಾಯಿಸಲು, ನಾವೆಲ್ಲರೂ ಸಮಗ್ರತೆಯಿಂದ ವರ್ತಿಸಬೇಕು. ಇದರರ್ಥ ನಾವು ನಮಗೆ ಅನ್ವಯಿಸುವ ಕಾನೂನುಗಳ ಪಠ್ಯ ಮತ್ತು ಉದ್ದೇಶವನ್ನು ಪಾಲಿಸಬೇಕು, ಈ ನಡಾವಳಿಯನ್ನು ಎತ್ತಿಹಿಡಿಯಬೇಕು ಮತ್ತು ನಮ್ಮ ಬದ್ಧತೆಗಳನ್ನು ಗೌರವಿಸಬೇಕು.

ಇತರ ಉದ್ಯೋಗಿಗಳು, ಗ್ರಾಹಕರು, ಪೂರೈಕೆದಾರರು ಮತ್ತು ಇತರ ಮಧ್ಯಸ್ಥಗಾರರೊಂದಿಗಿನ ನಮ್ಮ ವ್ಯವಹಾರಗಳಲ್ಲಿ ನಾವು ನ್ಯಾಯಯುತವಾಗಿರಬೇಕು

ವಿಭಿನ್ನ ಆಲೋಚನೆಗಳು ಮತ್ತು ಅಭಿಪ್ರಾಯಗಳನ್ನು ಹೊಂದಿರುವ ಇತರರನ್ನು ನಾವು ಗೌರವಿಸುವುದು, ನಾವು ಕಾರ್ಯನಿರ್ವಹಿಸುವ ದೇಶಗಳ ಸಂಸ್ಕೃತಿಗಳು ಮತ್ತು ಪದ್ಧತಿಗಳ ಕಡೆಗೆ ಸೂಕ್ಷ್ಮತೆ ಮತ್ತು ಕಾಳಜಿಯಿಂದ ವರ್ತಿಸುವುದು, ಮತ್ತು ನಾವು ವ್ಯಾಪಾರ ನಡೆಸುವ ಸಮುದಾಯಗಳು ಮತ್ತು ಪರಿಸರಗಳ ಮೇಲೆ ನಮ್ಮ ಪ್ರಭಾವವನ್ನು ಪರಿಗಣಿಸಲು ಪ್ರಯತ್ನಿಸುವುದೂ ಸಹ ಅತ್ಯಗತ್ಯ,

## ವಿಶ್ವಾಸ ವಿರೋಧಿ ಮತ್ತು ಸ್ಪರ್ಧೆಯ ಕಾನೂನುಗಳ ಅನುಸರಣೆ

ನಾವು ಹುರುಪಿನಿಂದ ಸ್ಪರ್ಧಿಸುತ್ತೇವೆ, ಆದರೆ ಮುಕ್ತ ಮತ್ತು ನ್ಯಾಯಯುತ ಸ್ಪರ್ಧೆಯನ್ನು ಗೌರವಿಸುತ್ತೇವೆ. ಪರಿಣಾಮವಾಗಿ, ನಾವು ಎಲ್ಲಾ ಅನ್ವಯಿಸುವ ವಿಶ್ವಾಸವಿರೋಧಿ ಮತ್ತು ಸ್ಪರ್ಧೆಯ ಕಾನೂನುಗಳನ್ನು ಅನುಸರಿಸಬೇಕು. ಈ ಕಾನೂನುಗಳನ್ನು ಉಲ್ಲಂಘಿಸುವ ಯಾವುದೇ ಚಟುವಟಿಕೆಗಳಲ್ಲಿ ನಾವು ತೊಡಗಿಸಿಕೊಳ್ಳುವುದಿಲ್ಲ. ಉದಾಹರಣೆಗೆ ಬೆಲೆಗಳು, ರಿಯಾಯಿತಿಗಳು ಅಥವಾ ಮಾರಾಟದ ನಿಯಮಗಳನ್ನು ಸರಿಪಡಿಸಲು, ಉತ್ಪಾದನೆಯನ್ನು ಮಿತಿಗೊಳಿಸಲು, ಮಾರುಕಟ್ಟೆಗಳನ್ನು ವಿಭಜಿಸಲು, ಬಿಡ್ಡಿಂಗ್ ಚಟುವಟಿಕೆಗಳನ್ನು ಸಂಘಟಿಸಲು, ಗ್ರಾಹಕರು ಅಥವಾ ಪೂರೈಕೆದಾರರನ್ನು ಬಹಿಷ್ಕರಿಸಲು, ಉದ್ಯೋಗಿ ಪರಿಹಾರವನ್ನು ಸರಿಪಡಿಸಲು ನಮ್ಮ ಪ್ರತಿಸ್ಪರ್ಧಿಗಳೊಂದಿಗೆ ಒಪ್ಪಿಕೊಳ್ಳುವುದು ಅಥವಾ ಪರಸ್ಪರರ ಉದ್ಯೋಗಿಗಳನ್ನು ನೇಮಿಸಿಕೊಳ್ಳದಿರಲು ಒಪ್ಪಿಕೊಳ್ಳುವುದು ಇತ್ಯಾದಿ.

ನಮ್ಮ ***ವಿಶ್ವಾಸ ವಿರೋಧಿ ಮತ್ತು ಸ್ಪರ್ಧೆಯ ನೀತಿ*** ಈ ಬದ್ಧತೆಯನ್ನು ನಾವು ಹೇಗೆ ಎತ್ತಿಹಿಡಿಯುತ್ತೇವೆ ಎಂಬುದರ ಕುರಿತು ಸಂಪೂರ್ಣ ವಿವರಣೆ ಒದಗಿಸುತ್ತದೆ.

***Q: ಆಟೋ ಶಾಂಘೈನಲ್ಲಿ, ಮುಂಚೆ ನನ್ನೊಂದಿಗೆ ಮಾರಾಟದ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಸಹೋದ್ಯೋಗಿಯೊಬ್ಬರನ್ನು ಭೇಟಿಯಾದೆ. ಈಗ ಅವರು ನಮ್ಮ ಪ್ರತಿಸ್ಪರ್ಧಿಯೊಬ್ಬರಿಗಾಗಿ ಕೆಲಸ ಮಾಡುತ್ತಿದ್ದಾರೆ. ಊಟದ ಸಮಯದಲ್ಲಿ, ಕಷ್ಟವೆನಿಸಬಹುದಾದ ಹೊಸ ಖರೀದಿದಾರರನ್ನು ಎದುರಿಸಲು ನಾವು ಜಂಟಿ ಕಾರ್ಯತಂತ್ರ ಬಳಸಬಹುದೆ ಎಂದು ಅವರು ಕೇಳಿದರು. ನಾನು ಅವರಿಗೆ ನಂತರ ಉತ್ತರಿಸುವುದಾಗಿ ಹೇಳಿದೆ. ನಾನೇನು ಮಾಡಬೇಕಿತ್ತು?***

*A: ಮಾಜಿ ಸಹೋದ್ಯೋಗಿಯೊಂದಿಗೆ ಊಟ ಮಾಡುವುದು ಸಮಸ್ಯೆಯಲ್ಲವಾದರೂ, ಗ್ರಾಹಕರ ಬಗ್ಗೆ ಪ್ರತಿಸ್ಪರ್ಧಿಯೊಂದಿಗೆ ಕಾರ್ಯತಂತ್ರವನ್ನು ಸಂಘಟಿಸುವ ಯಾವುದೇ ಪ್ರಯತ್ನವನ್ನು ಕಟ್ಟುನಿಟ್ಟಾಗಿ*

*ನಿಷೇಧಿಸಲಾಗಿದೆ. ಈ ಪರಿಸ್ಥಿತಿಯಲ್ಲಿ, ತಕ್ಷಣವೇ ಕಾರ್ಯತಂತ್ರದ ಸಮನ್ವಯದ ಬಗ್ಗೆ ಮಾತನಾಡುವುದನ್ನು ನಿಲ್ಲಿಸಿ ಮತ್ತು ವಿಷಯವನ್ನು ಚರ್ಚಿಸದಂತೆ ಮಾಜಿ ಸಹೋದ್ಯೋಗಿಗೆ ತಿಳಿಸಿ. ನಂತರ ತಕ್ಷಣವೇ ಕಾನೂನು ಅಥವಾ ಅನುಸರಣೆ ವಿಭಾಗಕ್ಕೆ ತಿಳಿಸಿ.*

## ಲಂಚ-ವಿರೋಧಿ ಕಾನೂನುಗಳ ಅನುಸರಣೆ

ನಾವು ನೇರವಾಗಿ ಅಥವಾ *ಥರ್ಡ್ ಪಾರ್ಟಿಗಳ* ಮೂಲಕ *ಲಂಚ* ಅಥವಾ *ಕಿಕ್‌ಬ್ಯಾಕ್‌ಗಳನ್ನು*. ನೀಡುವುದಿಲ್ಲ ಅಥವಾ ಸ್ವೀಕರಿಸುವುದಿಲ್ಲ *ಬೆಲೆ ಇರುವ ಯಾವುದನ್ನಾದರೂ* ನೀಡುವಲ್ಲಿ ಅಥವಾ ಸ್ವೀಕರಿಸುವಾಗ, ಹಾಗೆ ಮಾಡುವುದರಿಂದ ವ್ಯವಹಾರದ ನಿರ್ಧಾರದ ಮೇಲೆ ಪ್ರಭಾವ ಬೀರಬಹುದೇ ಅಥವಾ ಇತರರು ಅಂತಹ ಪ್ರಭಾವವನ್ನು ಗ್ರಹಿಸುವಂತೆ ಮಾಡಬಹುದೇ ಎಂದು ನಾವು ಯೋಚಿಸಬೇಕು. ನಾವು ಮಾಡುವ ಎಲ್ಲಾ ಪಾವತಿಗಳ ದಾಖಲೆಗಳು ಯಾವಾಗಲೂ ನಿಖರವಾಗಿರಬೇಕು ಮತ್ತು ಪೂರ್ಣವಾಗಿರಬೇಕು ಈ ಬಾಧ್ಯತೆಗಳು ಎಲ್ಲಾ ಸಂದರ್ಭಗಳಲ್ಲಿ ಅನ್ವಯಿಸುತ್ತವೆ ಆದರೆ *ಸರ್ಕಾರಿ ಅಧಿಕಾರಿಗಳನ್ನು* ಒಳಗೊಂಡಿರುವ ವಿಷಯಗಳಲ್ಲಿ ಹೆಚ್ಚು ಕಟ್ಟುನಿಟ್ಟಾಗಿರುತ್ತವೆ.

ಸ್ಥಳೀಯ ಕಾನೂನುಗಳು ಅಥವಾ ಸಾಂಸ್ಕೃತಿಕ ಆಚರಣೆಗಳು ಏನೇ ಇರಲಿ ಅವೆಲ್ಲವುಗಳಿಗೂ ಯಾವುದೇ ಹೊರತಿಲ್ಲದೆ, ಲಂಚ-ವಿರೋಧಕ್ಕೆ ನಮ್ಮ ಬದ್ಧತೆಯು ನಮ್ಮ ಎಲ್ಲಾ ಕಾರ್ಯಾಚರಣೆಗಳಿಗೆ ಅನ್ವಯಿಸುತ್ತದೆ. ನಮ್ಮ ಪರವಾಗಿ ಕಾರ್ಯನಿರ್ವಹಿಸುವ ಥರ್ಡ್ ಪಾರ್ಟಿಗಳು ಈ ಬದ್ಧತೆಯನ್ನು ಎತ್ತಿಹಿಡಿಯಬೇಕೆಂದು ಎಂಬುದು ನಮ್ಮ ನಿರೀಕ್ಷೆ.

ಲಂಚರಹಿತ ವ್ಯವಹಾರವನ್ನು ನಡೆಸುವಲ್ಲಿ ನಮ್ಮ ಬದ್ಧತೆಯನ್ನು ಕುರಿತು ಇನ್ನಷ್ಟು ತಿಳಿದುಕೊಳ್ಳಲು, ನಮ್ಮ ***>ಲಂಚ ಮತ್ತು ಅನುಚಿತ ಪಾವತಿಗಳ ನೀತಿಯನ್ನು ನೋಡಿ.***

***Q: ನನ್ನ ದೇಶದಲ್ಲಿ, ಸರ್ಕಾರಿ ನೌಕರರಿಗೆ ಸಣ್ಣ ವೇತನಗಳಿರುವುದು ಸಾಮಾನ್ಯವಾಗಿದೆ (ಸಾಮಾನ್ಯವಾಗಿ $100 ಕ್ಕಿಂತ ಕಡಿಮೆ) ಆದ್ದರಿಂದ ಪರವಾನಗಿಗಳನ್ನು ಹೆಚ್ಚು ತ್ವರಿತವಾಗಿ ನೀಡಲಾಗುತ್ತದೆ. ನಮ್ಮ ನಡಾವಳಿ ಮತ್ತು ನೀತಿಗಳ ಅಡಿಯಲ್ಲಿ ಈ ಪಾವತಿಗಳನ್ನು ಮಾಡಲು ನನಗೆ ಅನುಮತಿ ಇದೆಯೇ?***

*A: ಇಲ್ಲ. ನಮ್ಮ ಕೋಡ್ ಮತ್ತು **ಲಂಚ & ಅನುಚಿತ ಪಾವತಿಗಳ ನೀತಿ** ಈ ಪಾವತಿಗಳನ್ನು ನಿಷೇಧಿಸುತ್ತದೆ, ಇದನ್ನು ಸಾಮಾನ್ಯವಾಗಿ "ಸುಲಭೀಕರಣ" (ಅಥವಾ "ಗ್ರೀಸ್") ಪಾವತಿಗಳು ಎಂದು ಕರೆಯಲಾಗುತ್ತದೆ. ಕೆಲವು ದೇಶಗಳಲ್ಲಿ ಈ ಪಾವತಿಗಳು ಕಾನೂನುಬದ್ಧ ಮತ್ತು ಸಾಮಾನ್ಯವಾಗಿದ್ದರೂ, ಇತರ ಹಲವು ದೇಶಗಳಲ್ಲಿ ಅವು ಕಾನೂನುಬಾಹಿರವಾಗಿವೆ.*

***Q: ನಮ್ಮ ಸುರಕ್ಷತಾ ಅನುಸರಣೆಯನ್ನು ನೋಡಿಕೊಳ್ಳುವ ಸರ್ಕಾರಿ ಅಧಿಕಾರಿಯೊಬ್ಬರು ನನಗೆ ಅವರ ಸೋದರಳಿಯನ ರೆಸ್ಯೂಮೆ ನೀಡಿದರು ಮತ್ತು ನನ್ನ ಇಲಾಖೆಯಲ್ಲಿ ಲಭ್ಯವಿರಬಹುದಾದ ಯಾವುದೇ ಹುದ್ದೆಗಳಿಗೆ ಅವರನ್ನು ಪರಿಗಣಿಸುವಂತೆ ಕೇಳಿಕೊಂಡರು. ನಾನು ರೆಸ್ಯೂಮೆಯನ್ನು ಪರಿಶೀಲಿಸಿದ್ದೇನೆ ಮತ್ತು ಅವರು ಬಲವಾದ ಶಿಫಾರಸುಗಳನ್ನು ಹೊಂದಿದ್ದಾರೆ. ನಾನೇನು ಮಾಡಬೇಕು?***

*A: ತಕ್ಷಣವೇ ಈ ವಿನಂತಿಯ ಕುರಿತು ಕಾನೂನು ಅಥವಾ ಅನುಸರಣೆಯ ಮೇಲ್ವಿಚಾರಕರಿಗೆ ತಿಳಿಸಿ. ಅರ್ಹ ಅರ್ಜಿದಾರರಾಗಿ, ಲಭ್ಯ ಸ್ಥಾನಕ್ಕಾಗಿ ಇತರ ಅರ್ಹ ಅರ್ಜಿದಾರರಂತೆಯೇ ಅವರನ್ನು ಪರಿಗಣಿಸಬೇಕು. ನಮ್ಮ ಸಂಬಂಧಗಳನ್ನು ಸಂರಕ್ಷಿಸುವಾಗ ನಾವು ಕಾನೂನು ಮತ್ತು ನಮ್ಮ ಮೌಲ್ಯಗಳನ್ನು ಗೌರವಿಸುತ್ತೇವೆ ಎಂದು ಖಚಿತಪಡಿಸಿಕೊಳ್ಳಲು ಈ ರೀತಿಯ ವಿನಂತಿಗಳನ್ನು ಎಚ್ಚರಿಕೆಯಿಂದ ನಿರ್ವಹಿಸುವ ಅಗತ್ಯವಿದೆ.*

## ಗುಂಪುಕಟ್ಟುವಿಕೆ ಮತ್ತು ರಾಜಕೀಯ ಮಾಡುವುದು

ಏಕೆಂದರೆ ಗುಂಪುಕಟ್ಟುವಿಕೆ ಮತ್ತು ರಾಜಕೀಯ ಕೊಡುಗೆಗಳನ್ನು ನಿಯಂತ್ರಿಸುವ ಕಾನೂನುಗಳು ಬಹಳ ಸಂಕೀರ್ಣವಾಗಿರುತ್ತವೆ ಮತ್ತು ನಾವು ವ್ಯಾಪಾರ ಮಾಡುವ ಸ್ಥಳವನ್ನು ಆಧರಿಸಿ ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ನಿಯಂತ್ರಣಗಳಿರುತ್ತವೆ.

ಈ ಸಮಸ್ಯೆಗಳನ್ನು ನಿರ್ವಹಿಸುವ ನಿರ್ದಿಷ್ಟ ಅಧಿಕಾರ ಹೊಂದಿರುವ ಕಾರ್ಪೊರೇಟ್ ಕಚೇರಿಯ ಪ್ರತಿನಿಧಿಯಿಂದ ಲಿಖಿತ ಅನುಮತಿಯಿಲ್ಲದೆ ನಾವು ಯಾವುದೇ ಹಂತದ ಸರ್ಕಾರದೊಂದಿಗೆ ಗುಂಪುಕಟ್ಟುವಿಕೆಯಲ್ಲಿ ತೊಡಗಬಾರದು ಅಥವಾ ಮ್ಯಾಗ್ನಾ ಪರವಾಗಿ ರಾಜಕೀಯ ಕೊಡುಗೆಗಳನ್ನು (ಹಣಕಾಸಿನ ದೇಣಿಗೆಗಳು, ಸರಕುಗಳು ಅಥವಾ ಸೇವೆಗಳು ಸೇರಿದಂತೆ) ಮಾಡಬಾರದು.  ಹೆಚ್ಚಿನ ಮಾಹಿತಿಗಾಗಿ, ಸರ್ಕಾರಿ ವ್ಯವಹಾರಗಳ ಕಾನೂನು ಅಥವಾ ಅನುಸರಣೆ ತಂಡದ ಸದಸ್ಯರನ್ನು ಸಂಪರ್ಕಿಸಿ (ಹೆಚ್ಚಿನ ಮಾಹಿತಿಗಾಗಿ MagNET ನಲ್ಲಿ ***ಸರ್ಕಾರಿ ವ್ಯವಹಾರಗಳು*** ಪುಟಕ್ಕೆ ಭೇಟಿ ನೀಡಿ)

***Q: ನಮ್ಮ ಹೊಸ ಸ್ಥಾವರದ ಕಟ್ಟಡ ವಿನ್ಯಾಸಕ್ಕಾಗಿ ನಗರ ಅನುಮೋದನೆ ಪಡೆಯಲು ನಮಗೆ ತೊಂದರೆಯಾಗುತ್ತಿದೆ.  ನಗರದ ಒಬ್ಬ ಕೌನ್ಸಿಲರ್ ನನಗೆ ಚೆನ್ನಾಗಿ ಗೊತ್ತು. ಅವರನ್ನು ಕಾಫಿ ಕುಡಿಯಲು ಆಹ್ವಾನಿಸಿ ಅವರು ನಮಗೆ ಏಕೆ ಸಹಾಯ ಮಾಡಬೇಕು ಎಂಬುದನ್ನು ವಿವರಿಸಬೇಕು ಎಂದುಕೊಳ್ಳುತ್ತಿದ್ದೇನೆ. ನಾನು ಹಾಗೆ ಮಾಡಬಹುದೆ?***

*A: ಇಲ್ಲ. ಚುನಾಯಿತ ಸರ್ಕಾರಿ ಅಧಿಕಾರಿಯೊಂದಿಗಿನ ಈ ರೀತಿಯ ಸಭೆಯು ಸಾರ್ವಜನಿಕ ನಿರ್ಧಾರ ತೆಗೆದುಕೊಳ್ಳುವಿಕೆಯ ಮೇಲೆ ಪ್ರಭಾವ ಬೀರುವ ಉದ್ದೇಶದಿಂದ ಕೂಡಿರುವುದರಿಂದ, ಇದು ಸ್ಥಳೀಯ ಕಾನೂನಿನ ಅಡಿಯಲ್ಲಿ ಗುಂಪು ಕಟ್ಟುವಿಕೆಯಾಗಿ ಕಾಣುವ ಸಾಧ್ಯತೆಯಿದೆ. ಈ ಸಮಸ್ಯೆಗಳನ್ನು ನಿರ್ವಹಿಸಲು ನಿರ್ದಿಷ್ಟವಾಗಿ ಅಧಿಕಾರ ಹೊಂದಿರುವ ಕಾರ್ಪೊರೇಟ್ ಕಚೇರಿ ಪ್ರತಿನಿಧಿಯಿಂದ ಲಿಖಿತ ಅನುಮತಿಯಿಲ್ಲದೆ ನಾವು ಯಾವುದೇ ಗುಂಪುಕಟ್ಟುವಿಕೆಯ ಕ್ರಿಯೆಯಲ್ಲಿ ತೊಡಗಬಾರದು.*

ಮ್ಯಾಗ್ನದ ಯಶಸ್ಸು ತರುವ ಜವಾಬ್ದಾರಿಯಲ್ಲಿ ನಾವೆಲ್ಲರೂ, ಉದ್ಯೋಗಿಗಳು ಮತ್ತು ನಿರ್ವಹಣಾ ತಂಡವು ಸಮಪಾಲು ವಹಿಸುತ್ತೇವೆ ಎಂಬುದು ನಮ್ಮ ಕಾರ್ಯಾಚರಣೆಯ ತತ್ವವಾಗಿದೆ. ಈ ಜವಾಬ್ದಾರಿಯನ್ನು ನಿಭಾಯಿಸಲು, ನಾವೆಲ್ಲರೂ ಸಮಗ್ರತೆಯಿಂದ ವರ್ತಿಸಬೇಕು. ಇದರರ್ಥ ನಾವು ನಮಗೆ ಅನ್ವಯಿಸುವ ಕಾನೂನುಗಳ ಪಠ್ಯ ಮತ್ತುಉದ್ದೇಶವನ್ನು ಪಾಲಿಸಬೇಕು, ಈ ನಡಾವಳಿಯನ್ನು ಎತ್ತಿಹಿಡಿಯಬೇಕು ಮತ್ತು ನಮ್ಮ ಬದ್ಧತೆಗಳನ್ನು ಗೌರವಿಸಬೇಕು.

# ನಮ್ಮ ಷೇರುದಾರರು/ಹೂಡಿಕೆದಾರರು

## ಹಣಕಾಸಿನ ವರದಿ

ಮ್ಯಾಗ್ನದ ವಿಶ್ವಾಸಾರ್ಹತೆಯು ನಮ್ಮ ಹಣಕಾಸು ವರದಿಗಳ ನಿಖರತೆಯನ್ನು ಅವಲಂಬಿಸಿರುತ್ತದೆ ಹೀಗಾಗಿ ನಾವು ಹಣಕಾಸು ವರದಿಗೆ ಸಂಬಂಧಿಸಿದ ಎಲ್ಲಾ ಅನ್ವಯವಾಗುವ ಕಾನೂನುಗಳನ್ನು ಅನುಸರಿಸಬೇಕು. ಹಣಕಾಸಿನ ವಿವರಗಳನ್ನು ದಾಖಲಿಸುವಾಗಲೂ ಸಹ ನಾವು ಅತ್ಯಂತ ನಿಖರವಾಗಿರಬೇಕು

ವರದಿಗಳ ನಿಖರತೆ ಮತ್ತು ಸಮಯೋಚಿತತೆಯನ್ನು ಖಚಿತಪಡಿಸಿಕೊಳ್ಳಲು ಹಣಕಾಸಿನ ನಿಯಂತ್ರಣಗಳನ್ನುರಚಿಸಲಾಗಿದೆ. ಯಾರಾದರೂ ಸುಳ್ಳು ಅಥವಾ ತಪ್ಪು ದಾರಿಗೆಳೆಯುವ ವಿವರಗಳನ್ನು ನಮೂದಿಸುವ ಮೂಲಕ ಈ ನಿಯಂತ್ರಣಗಳನ್ನು ತಪ್ಪಿಸಲು ಕೈಗೊಳ್ಳುವ ಯಾವುದೇ ಕ್ರಮವನ್ನು ಅಥವಾ ಬೇರೆಯವರಿಗೆ ಅಂತಹ ಯಾವುದೇ ಕ್ರಮ ಕೈಗೊಳ್ಳುವಂತೆ ಆದೇಶಿಸುವುದನ್ನು ನಾವು ಸಹಿಸುವುದಿಲ್ಲ. ಹಾಗೆ ಮಾಡುವುದು ನಮ್ಮ ನಡಾವಳಿಯ ಗಂಭೀರ ಉಲ್ಲಂಘನೆಯಾಗಿದೆ ಹಾಗೂ ಅದು ಕ್ರಿಮಿನಲ್ ಅಪರಾಧವೂ ಆಗಿರಬಹುದು.

***Q: ನಾನು ಅಕೌಂಟಿಂಗ್‌ನಲ್ಲಿ ಕೆಲಸ ಮಾಡುತ್ತಿದ್ದೇನೆ. ಇತ್ತೀಚೆಗೆ ಅನೇಕ ದೊಡ್ಡ ಪೂರೈಕೆದಾರರ ಇನ್‌ವಾಯ್ಸ್‌ಗಳನ್ನು ಸ್ವೀಕರಿಸಿದೆ. ನನ್ನ ಬಾಸ್ ಅವುಗಳನ್ನು ಮುಂದಿನ ತ್ರೈಮಾಸಿಕದಲ್ಲಿ ವರದಿ ಮಾಡುವಂತೆ ಹೇಳಿದರು. ಹಾಗೆ ಮಾಡುವುದರಿಂದ ನಮ್ಮ ಹಣಕಾಸಿನ ಫಲಿತಾಂಶಗಳು ಮತ್ತು ನಮ್ಮ ಷೇರು ಬೆಲೆ ಸುಧಾರಿಸುತ್ತದೆ ಎಂತಲೂ ಹೇಳಿದರು. ಈ ಸೂಚನೆಗಳನ್ನು ನಾನು ಅನುಸರಿಸಬೇಕಾ?***

*A: ಇಲ್ಲ. ತಪ್ಪಾದ ದಿನಾಂಕಕ್ಕೆ ಅಥವಾ ತಡವಾಗಿ ವರದಿ ಮಾಡುವುದು ಈ ತ್ರೈಮಾಸಿಕದಲ್ಲಿ ಅಧಿಕ ಗಳಿಕೆಯಾಗಿದೆ ಎಂಬುದನ್ನು ತೋರಿಸುತ್ತದೆ ಹಾಗೂ ಇದು ನಮ್ಮ ಹಣಕಾಸಿನ ಫಲಿತಾಂಶಗಳ ಮೇಲೆ ಪ್ರಭಾವ ಬೀರುತ್ತದೆ.  ಎಲ್ಲಾ ಹಣಕಾಸಿನ ಮಾಹಿತಿಯನ್ನು ನಿಖರವಾಗಿ ದಾಖಲಿಸಲು ವಿಫಲವಾದರೆ, ಅದು ಮ್ಯಾಗ್ನಗೆ ಸಹಾಯ ಮಾಡುವ ಉದ್ದೇಶದಿಂದಲೇ ಆಗಿದ್ದರೂ ಸಹ, ಈ ನಡಾವಳಿ ಮತ್ತು ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟ ಲೆಕ್ಕಪತ್ರ ತತ್ವಗಳ ಉಲ್ಲಂಘನೆಯಾಗುತ್ತದೆ. ಹೀಗೆ ಮಾಡುವಂತೆ ನಮಗೆ ಯಾರಾದರೂ ಹೇಳಿದರೆ ನಾವದನ್ನು ನಿರಾಕರಿಸಬೇಕು.  ಇದು ನಮಗೆ ಸರಿ ಎನಿಸದಿದ್ದರೆ ಅಥವಾ ಅವರು ಒತ್ತಾಯಿಸುವದನ್ನು ಮುಂದುವರಿಸಿದರೆ, ಕೂಡಲೇ ಗ್ರೂಪ್ ಅಥವಾ ಕಾರ್ಪೊರೇಟ್ ಕಚೇರಿಯಲ್ಲಿ, ಹಣಕಾಸು ಅಥವಾ ಅನುಸರಣೆಗೆ ಸಂಬಂಧಪಟ್ಟ ಹಣಕಾಸು ಅಧಿಕಾರಿಗಳಿಗೆ ವರದಿ ಮಾಡಬೇಕು. **ಮ್ಯಾಗ್ನ ಹಾಟ್‌ಲೈನ್**. ಬಳಸಿಯೂ ಸಹ ಸಮಸ್ಯೆಯನ್ನು ವರದಿ ಮಾಡಬಹುದು.*

## ಅಸಮರ್ಪಕ ಸೆಕ್ಯುರಿಟೀಸ್ ಟ್ರೇಡಿಂಗ್

ನಾವು ಕೆಲವೊಮ್ಮೆ ಮ್ಯಾಗ್ನ, ನಮ್ಮ ಪೂರೈಕೆದಾರರು, ಸ್ಪರ್ಧಿಗಳು, ಗ್ರಾಹಕರು ಅಥವಾ ಪಾಲುದಾರರ ಬಗ್ಗೆ ಅವರ ಕೆಲಸದ ಮೂಲಕ ಗೌಪ್ಯ ಮಾಹಿತಿಗೆ ಪ್ರವೇಶ ಪಡೆಯಬಹುದು. ಈ ಒಳಗಿನ ಮಾಹಿತಿಯನ್ನು ನಾವು ಹೂಡಿಕೆ ಉದ್ದೇಶಗಳಿಗಾಗಿ ಬಳಸಿದರೆ, ಅದು ಇತರ ಹೂಡಿಕೆದಾರರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಆಂತರಿಕ ಮಾಹಿತಿಯನ್ನು ಬಳಸಿಕೊಂಡು ಸ್ಟಾಕ್, ಬಾಂಡ್ ಮುಂತಾದ ಸೆಕ್ಯುರಿಟಿಗಳನ್ನು ಕೊಳ್ಳುವುದು ಅಥವಾ ಮಾರುವುದು ಕಾನೂನು ಬಾಹಿರವಾಗಿದೆ ಹಾಗೂ ಇದಕ್ಕಾಗಿ ಭಾರಿ ದಂಡ ತೆರಬೇಕಾಗುತ್ತದೆ. ಹೀಗಾಗಿ, ನಮಗೆ

ಮ್ಯಾಗ್ನ ಅಥವಾ ಬೇರಾವುದೇ ಕಂಪನಿಯ ಆಂತರಿಕ ಮಾಹಿತಿಯು ಲಭ್ಯವಿದ್ದರೆ, ಅಂತಹ ಮಾಹಿತಿಯು ಸಾರ್ವಜನಿಕವಾಗುವವರೆಗೆ ಮತ್ತು ಹೂಡಿಕೆದಾರರು ಅದನ್ನು ಮೌಲ್ಯಮಾಪನ ಮಾಡುವವರೆಗೆ ಆ ಕಂಪನಿಯಲ್ಲಿ ಹೂಡಿಕೆ ಮಾಡುವುದನ್ನು ನಾವು ನಿಷೇಧಿಸುತ್ತೇವೆ.

ಹಾಗೆಯೇ ಆಂತರಿಕ ಮಾಹಿತಿಯನ್ನು ಸ್ವೀಕರಿಸುವ ಅಧಿಕಾರವಿಲ್ಲದ ನಮ್ಮ ಸಹೋದ್ಯೋಗಿಗಳು ಅಥವಾ ಮ್ಯಾಗ್ನಗೆ ಸಂಬಂಧಪಡದ ಯಾವದೇ ವ್ಯಕ್ತಿಗಳೊಂದಿಗೆ ಅಂತಹ ಮಾಹಿತಿಯನ್ನು ಹಂಚಿಕೊಳ್ಳಲು ನಮಗೆ ಅನುಮತಿ ಇಲ್ಲ. ಈ ನಿಷೇಧವು ಆಂತರಿಕ ಮಾಹಿತಿಯನ್ನು ಸ್ನೇಹಿತರು ಹಾಗೂ ಸಂಬಂಧಿಗಳೊಂದಿಗೆ ಹಂಚಿಕೊಳ್ಳಬಾರದು ಎಂತಲೂ ಹೇಳುತ್ತದೆ

***ಇನ್‌ಸೈಡರ್ ಟ್ರೇಡಿಂಗ್ ಮತ್ತು ಬ್ಲ್ಯಾಕ್‌ಔಟ್ ಪಾಲಿಸಿ***ಯಲ್ಲಿ ಪಟ್ಟಿ ಮಾಡಲಾದ ನಮ್ಮ ನಿರ್ದೇಶಕರು ಮತ್ತು ಅಧಿಕಾರಿಗಳು ಹಾಗೂ ಇತರ ಗೊತ್ತುಪಡಿಸಿದ ವ್ಯಕ್ತಿಗಳಿಗೆ ಇನ್ನೂ ಕಟ್ಟುನಿಟ್ಟಾದ ನಿಯಮಗಳಿವೆ. ಈ ವ್ಯಕ್ತಿಗಳು ಕೆಲವು ನಿರ್ದಿಷ್ಟ ಸಮಯಗಳಲ್ಲಿ ಮ್ಯಾಗ್ನ ಸೆಕ್ಯುರಿಟಿಗಳನ್ನು ಖರೀದಿಸಲು ಅಥವಾ ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ.

ನಮ್ಮ ***ಇನ್‌ಸೈಡರ್ ಟ್ರೇಡಿಂಗ್ ಮತ್ತು ಬ್ಲ್ಯಾಕ್‌ಔಟ್ ಪಾಲಿಸಿ*** ಯು ಇನ್‌ಸೈಡರ್ ಟ್ರೇಡಿಂಗ್ ಮತ್ತು ಅಸಮರ್ಪಕ ಬಹಿರಂಗಪಡಿಸುವಿಕೆಯನ್ನು ತಪ್ಪಿಸುವುದು ಹೇಗೆ ಎಂಬುದರ ಕುರಿತು ಮಾರ್ಗದರ್ಶನ ನೀಡುತ್ತದೆ.

***Q: ಆಂತರಿಕ ವರದಿಗಳ ಆಧಾರದ ಮೇಲೆ, ನಮ್ಮ ಮಾರಾಟವು ಗಮನಾರ್ಹವಾಗಿ ಹೆಚ್ಚಾಗಿದೆ ಮತ್ತು ಈ ತ್ರೈಮಾಸಿಕದಲ್ಲಿ ನಮ್ಮ ಲಾಭವು ಉದ್ಯಮದ ವಿಶ್ಲೇಷಕರು ನಿರೀಕ್ಷಿಸಿದ್ದಕ್ಕಿಂತ ಹೆಚ್ಚಾಗಿರುತ್ತದೆ ಎಂದು ತಿಳಿದು ಬಂದಿದೆ ನಮ್ಮ ತ್ರೈಮಾಸಿಕ ಗಳಿಕೆಗಳನ್ನು ಸಾರ್ವಜನಿಕವಾಗಿ ಪ್ರಕಟಿಸುವ ಮೊದಲು ನನ್ನ ಅಕ್ಕನಿಗೆ ಮ್ಯಾಗ್ನ ಸ್ಟಾಕ್ ಖರೀದಿಸಲು ಹೇಳಬಹುದೇ?***

*A: ಇಲ್ಲ. ನಮ್ಮ ಅಥವಾ ನಮ್ಮ ಕುಟುಂಬ, ಸ್ನೇಹಿತರು ಸೇರಿದಂತೆ ನಮಗೆ ಬೇಕಾದವರ ಲಾಭಕ್ಕಾಗಿ ಆಂತರಿಕ ಮಾಹಿತಿಯನ್ನು ಬಳಸಿಕೊಳ್ಳುವುದು ನಮ್ಮ ನಡಾವಳಿ ಹಾಗೂ ಕಾನೂನಿಗೆ ವಿರುದ್ಧವಾಗಿದೆ*

## ಸಾರ್ವಜನಿಕ ಪ್ರಕಟಣೆಗಳು

ಸಾರ್ವಜನಿಕ ಕಂಪನಿಯಾಗಿ, ನಮ್ಮ ಸಾರ್ವಜನಿಕ ದಾಖಲೆಗಳಲ್ಲಿ ಪೂರ್ಣ, ನಿಖರ ಮತ್ತು ಸಮಯೋಚಿತ ಮಾಹಿತಿಯನ್ನು ಒದಗಿಸುವುದು ನಮ್ಮ ಜವಾಬ್ದಾರಿಯಾಗಿದೆ. ನಾವು ಆ ಜವಾಬ್ದಾರಿಯನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳುತ್ತೇವೆ ಮತ್ತು ನಮ್ಮ ವ್ಯಾಪಾರ, ಕಾರ್ಯಾಚರಣೆಗಳು ಮತ್ತು ಹಣಕಾಸಿನ ಪರಿಸ್ಥಿತಿಗಳ ಬಹಿರಂಗಪಡಿಸುವಿಕೆಗೆ ಸಂಬಂಧಿಸಿದ ಎಲ್ಲಾ ಅನ್ವಯವಾಗುವ ಕಾನೂನುಗಳನ್ನು ಅನುಸರಿಸಲು ಪ್ರಯತ್ನಿಸುತ್ತೇವೆ. ನಾವು ಈ ಕಠಿಣ ಕಾನೂನು ಅವಶ್ಯಕತೆಗಳನ್ನು ಅನುಸರಿಸುವ ಸಲುವಾಗಿ ಹಿರಿಯ ಕಾರ್ಪೊರೇಟ್ ನಿರ್ವಹಣೆಯನ್ನು ಒಳಗೊಂಡಿರುವ ಕಾರ್ಪೊರೇಟ್ ಬಹಿರಂಗಪಡಿಸುವಿಕೆಯ ಸಮಿತಿಯನ್ನು ಸ್ಥಾಪಿಸಿದ್ದೇವೆ.

ಮಾಧ್ಯಮ ಅಥವಾ ಷೇರುದಾರರೊಂದಿಗೆ ಮಾತನಾಡಲು ಅಥವಾ ಯಾವುದೇ ರೀತಿಯ ಸಾರ್ವಜನಿಕ ಬಹಿರಂಗಪಡಿಸುವಿಕೆಯನ್ನು ಮಾಡಲು ಅಧಿಕಾರ ಹೊಂದಿರುವ ಯಾವುದೇ ಉದ್ಯೋಗಿ, ಅನ್ವಯವಾಗುವ ಸೆಕ್ಯುರಿಟೀಸ್ ಕಾನೂನುಗಳು ಮತ್ತು ನಮ್ಮ ***ಕಾರ್ಪೊರೇಟ್ ಬಹಿರಂಗಪಡಿಸುವಿಕೆಯ ನೀತಿ*** ಅನ್ನು ಅನುಸರಿಸಬೇಕು.

ಹೆಚ್ಚಿನ ವಿವರಗಳನ್ನು ನಮ್ಮ ***ಕಾರ್ಪೊರೇಟ್ ಬಹಿರಂಗಪಡಿಸುವಿಕೆಯ ನೀತಿ*** ನಲ್ಲಿ ಕಾಣಬಹುದು

# ನಮ್ಮ ಉದ್ಯೋಗಿಗಳು

ನಮ್ಮ ಉದ್ಯೋಗಿಗಳ ವೈವಿಧ್ಯತೆಯು ನಮ್ಮ ಜಾಗತಿಕ ಸಂಸ್ಥೆಯ ಶಕ್ತಿಯಾಗಿದೆ. ಹೀಗಾಗಿ ನಾವು ವಿಭಿನ್ನ ಹಿನ್ನೆಲೆಗಳು, ಸಾಮರ್ಥ್ಯಗಳು ಮತ್ತು ಅಭಿಪ್ರಾಯಗಳ ಜನರನ್ನು ಆದರಿಸುತ್ತೇವೆ ಮತ್ತು ಗೌರವಿಸುತ್ತೇವೆ.

## ಪರಿಸರ ಮತ್ತು ಔದ್ಯೋಗಿಕ ಆರೋಗ್ಯ ಮತ್ತು ಸುರಕ್ಷತೆ

ನಾವು ಸುರಕ್ಷಿತ ಮತ್ತು ಸ್ವಚ್ಛ ಪರಿಸರದಲ್ಲಿ ಕೆಲಸ ಮಾಡುವುದು ಅತ್ಯಗತ್ಯ. ನಮ್ಮ ಎಲ್ಲಾ ಕಾರ್ಯಾಚರಣೆಗಳು ಮತ್ತು ಪೂರೈಕೆ ಸರಪಳಿಯಲ್ಲಿ ಔದ್ಯೋಗಿಕ ಆರೋಗ್ಯ ಮತ್ತು ಸುರಕ್ಷತೆ ಹೊಂದಿರಲು ಹಾಗೂ ಪರಿಸರದೆಡೆಗೆ ಜವಾಬ್ದಾರಿಯುತರಾಗಿರುವ ನಿಟ್ಟಿನಲ್ಲಿ ಉದ್ಯಮದಲ್ಲೇ ಮುಂಚೂಣಿಯಲ್ಲಿರಲು ಪ್ರಯತ್ನಿಸುತ್ತೇವೆ.

ಪ್ರತಿ ಕಾರ್ಯಾಚರಣೆಗೆ ಎಲ್ಲಾ ಸಮಯದಲ್ಲೂ ವ್ಯವಸ್ಥಿತ ವಿಮರ್ಶೆ ಕಾರ್ಯಕ್ರಮವನ್ನು ಕಾರ್ಯಗತಗೊಳಿಸಲಾಗಿದೆ ಮತ್ತು ಮೇಲ್ವಿಚಾರಣೆ ಮಾಡಲಾಗುತ್ತದೆ ಎಂದು ಖಚಿತಪಡಿಸಿಕೊಳ್ಳುವ ಮೂಲಕ ನಮಗೆ ಅನ್ವಯಿಸುವ ಎಲ್ಲಾ ಆರೋಗ್ಯ, ಸುರಕ್ಷತೆ ಮತ್ತು ಪರಿಸರ ಕಾನೂನುಗಳು ಮತ್ತು ನಿಬಂಧನೆಗಳನ್ನು ಅನುಸರಿಸಲು ಮತ್ತು ಅವುಗಳನ್ನು ನಮ್ಮ ಪೂರೈಕೆದಾರರು ಅನುಸರಿಸುವುದನ್ನು ಖಚಿತಪಡಿಸಿಕೊಳ್ಳಲು ನಾವು ಬದ್ಧರಾಗಿದ್ದೇವೆ.

ರೋಗ್ಯ, ಸುರಕ್ಷತೆ ಮತ್ತು ಪರಿಸರಕ್ಕೆ ನಮ್ಮ ಬದ್ಧತೆಯನ್ನು ನಮ್ಮ ***ಎಂಪ್ಲಾಯೀ ಚಾರ್ಟರ್*** ಮತ್ತು ನಮ್ಮ ***ಕಾರ್ಯಾಚರಣಾ ತತ್ವಗಳು*** ನಲ್ಲಿ ವಿವರಿಸಲಾಗಿದೆ ಮತ್ತು ನಮ್ಮ ***ಆರೋಗ್ಯ, ಸುರಕ್ಷತೆ ಮತ್ತು ಪರಿಸರ ನೀತಿಯಲ್ಲಿ ಹೆಚ್ಚು ವಿವರವಾಗಿ ವಿವರಿಸಲಾಗಿದೆ.***

## ವೈಯಕ್ತಿಕ ಮಾಹಿತಿಯ ರಕ್ಷಣೆ

ನಾವು ನಮ್ಮ ಉದ್ಯೋಗಿಗಳ ಗೌಪ್ಯತೆಯನ್ನು ಗೌರವಿಸುತ್ತೇವೆ ಮತ್ತು ಅವರ ವೈಯಕ್ತಿಕ ಮಾಹಿತಿಯನ್ನು ರಕ್ಷಿಸಲು ಬದ್ಧರಾಗಿದ್ದೇವೆ. ನಾವು ವೈಯಕ್ತಿಕ ಮಾಹಿತಿಯನ್ನು ಕಾನೂನುಬದ್ಧವಾಗಿ, ಪಾರದರ್ಶಕವಾಗಿ ಮತ್ತು ನ್ಯಾಯಯುತವಾಗಿ ಪ್ರಕ್ರಿಯೆಗೊಳಿಸುತ್ತೇವೆ. ಹಾಗೆಯೇ ವೈಯಕ್ತಿಕ ಮಾಹಿತಿಯ ಸಮಗ್ರತೆ ಮತ್ತು ಗೌಪ್ಯತೆಯನ್ನು ರಕ್ಷಿಸಲು ನಾವು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

***Q: ನಾನು ಮಾನವ ಸಂಪನ್ಮೂಲ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದೇನೆ. ಇತ್ತೀಚೆಗೆ ಒಂದು ಹೊಸ ಮೆಡಿಕಲ್ ಕ್ಲಿನಿಕ್ ಕುರಿತ ಪ್ರಮುಖ ಮಾಹಿತಿಗಳನ್ನು ಕಳಿಸುವ ಸಲುವಾಗಿ ಮಾರ್ಕೆಟಿಂಗ್ ಕಂಪನಿಯೊಂದು ನಮ್ಮ ಎಲ್ಲಾ ಉದ್ಯೋಗಿಗಳ ಮನೆಯ ವಿಳಾಸಗಳನ್ನು ಕೇಳಿದೆ. ಬಹುಶಃ ಉದ್ಯೋಗಿಗಳು ಆ ಮಾಹಿತಿಯಿಂದ ಪ್ರಯೋಜನ ಪಡೆಯುತ್ತಿದ್ದರೂ, ನಾನು ಆ ಮಾರ್ಕೆಟಿಂಗ್ ಕಂಪನಿಗೆ ವಿಳಾಸಗಳನ್ನು ಕೊಡಲಿಲ್ಲ. ನಾನು ಮಾಡಿದ್ದು ಸರಿಯಲ್ಲವೆ?***

*A: ಹೌದು. ನಮ್ಮ ಮನೆಯ ವಿಳಾಸಗಳು ಖಾಸಗಿಯಾಗಿರುತ್ತವೆ ಮತ್ತು ಅವುಗಳನ್ನು ಕಾನೂನುಬದ್ಧ ವ್ಯಾಪಾರ ಮತ್ತು ಉದ್ಯೋಗದ ಕಾರಣಗಳಿಗಾಗಿ ಅಥವಾ ಕಾನೂನಿನ ಅಗತ್ಯವಿದ್ದಲ್ಲಿ ಮಾತ್ರ ಬಹಿರಂಗಪಡಿಸಬೇಕು. ಈ ಉದಾಹರಣೆಯಲ್ಲಿರುವಂತೆ ಉದ್ಯೋಗಿಗಳಿಗೆ ಸೇವೆಯನ್ನು ಮಾರಾಟ ಮಾಡುವ ಸಲುವಾಗಿ, ವೈಯಕ್ತಿಕ ಮಾಹಿತಿಯನ್ನು ಬಹಿರಂಗಪಡಿಸಬೇಕು ಎನ್ನುವುದು ಅದಕ್ಕೆ ಬೇಕಾದ ಸೂಕ್ತ ಕಾರಣವಲ್ಲ. ಹಾಗೆ ಮಾಡುವುದರಿಂದ ನಾವು ನಮ್ಮ ನಡಾವಳಿಗಳನ್ನು ಉಲ್ಲಂಘಿಸಿದಂತಾಗುತ್ತದೆ ಮತ್ತು ಅದು ಸ್ಥಳೀಯ ಗೌಪ್ಯತೆ ಕಾನೂನುಗಳ ಅಡಿಯಲ್ಲಿ ಕಾನೂನುಬಾಹಿರವಾಗಿರಬಹುದು.*

## ಮಾನವ ಹಕ್ಕುಗಳಿಗೆ ಗೌರವ

ಉದ್ಯೋಗಿಗಳು ಮತ್ತು ಇತರ ಮಧ್ಯಸ್ಥಗಾರರ ಮಾನವ ಹಕ್ಕುಗಳಿಗೆ ಗೌರವ ನೀಡುವುದು ನಮ್ಮ ನ್ಯಾಯೋಚಿತ ಉದ್ಯಮ ತತ್ವದ ಪ್ರಮುಖ ಅಂಶವಾಗಿದೆ.. ನಮಗೆ ಅನ್ವಯಿಸುವ ಎಲ್ಲಾ ಮಾನವ ಹಕ್ಕುಗಳ ಕಾನೂನುಗಳು ಮತ್ತು ನಿಬಂಧನೆಗಳನ್ನು ಅನುಸರಿಸಲು ನಾವು ಬದ್ಧರಾಗಿದ್ದೇವೆ.

ಎಂಪ್ಲಾಯೀ ಚಾರ್ಟರ್‌ಗೆ ಅನುಗುಣವಾಗಿ ನಾವು ನ್ಯಾಯಯುತವಾಗಿ ಮತ್ತು ಸಮಾನವಾಗಿ ವ್ಯವಹರಿಸುತ್ತೇವೆ. ನಾವು ಎಲ್ಲರಿಗೂ ಗೌರವಾನ್ವಿತ ಕೆಲಸದ ವಾತಾವರಣವನ್ನು ಖಚಿತಪಡಿಸಲು ಕಿರುಕುಳ ಮತ್ತು ತಾರತಮ್ಯ ನೀತಿಗಳನ್ನು ಸಮರ್ಪಕವಾಗಿ ಸ್ಥಾಪಿಸಿದ್ದೇವೆ ಹಾಗೂ ಅನುಚಿತ ನಡವಳಿಕೆಯನ್ನು ತಡೆಯಲು ದೂರು ಮತ್ತು ತನಿಖಾ ಕಾರ್ಯವಿಧಾನಗಳನ್ನು ಹೊಂದಿದ್ದೇವೆ. ನಮ್ಮ ಸ್ಥಳೀಯ ನೀತಿಗಳು ಕಾನೂನುಬದ್ಧತೆಯ ತಳಹದಿಯಲ್ಲಿ ವೈವಿಧ್ಯತೆಯನ್ನು ಗೌರವಿಸುತ್ತವೆ, ವೈಯಕ್ತಿಕ ಆಚರಣೆಗಳು ಮತ್ತು ನಂಬಿಕೆಗಳ ಸಹಿಷ್ಣುತೆಯನ್ನು ಉತ್ತೇಜಿಸುತ್ತವೆ ಹಾಗೂ ಅಗತ್ಯವಿರುವವರಿಗೆ ಸಹಾಯ ಕಲ್ಪಿಸುತ್ತವೆ. ನಾವು ಕೆಲಸದ ಸ್ಥಳದಲ್ಲಿ ಹಿಂಸೆ ಮತ್ತು ಬೆದರಿಸುವಿಕೆಯನ್ನು ನಿಷೇಧಿಸುವ ನೀತಿಗಳನ್ನೂ ಹೊಂದಿದ್ದೇವೆ.

ನಾವು ನಮ್ಮ ಉದ್ಯೋಗಿಗಳಿಗೆ ಉತ್ತಮ ಕೆಲಸದ ವಾತಾವರಣವನ್ನು ಒದಗಿಸುತ್ತೇವೆ ಹಾಗೂ ನಮ್ಮ ಸಂಸ್ಥೆ ಅಥವಾ ಪೂರೈಕೆ ಸರಪಳಿಯಲ್ಲಿ ಗುಲಾಮಗಿರಿ,ಬಾಲ ಕಾರ್ಮಿಕರು ಅಥವಾ ಬಲವಂತದ ಕಾರ್ಮಿಕರ ಬಳಕೆಗೆ ಅವಕಾಶವಿಲ್ಲ. ನಮ್ಮ ***ಜಾಗತಿಕ ಕಾರ್ಮಿಕ ಮಾನದಂಡಗಳು*** ಯುಎನ್ ಯುನಿವರ್ಸಲ್ ಡಿಕ್ಲರೇಶನ್ ಆಫ್ ಹ್ಯೂಮನ್ ರೈಟ್ಸ್, ಇಂಟರ್ನ್ಯಾಷನಲ್ ಲೇಬರ್ ಆರ್ಗನೈಸೇಶನ್ (ILO) ನ 8 ಮೂಲಭೂತ ಸಮಾವೇಶಗಳು ಮತ್ತು ಮೂಲಭೂತ ತತ್ವಗಳು ಮತ್ತು ಕೆಲಸದ ಹಕ್ಕುಗಳ ಮೇಲಿನ ILO ಘೋಷಣೆಯನ್ನು ಗುರುತಿಸುತ್ತದೆ. ರಾಷ್ಟ್ರೀಯ ಶಾಸಕಾಂಗ ಅಗತ್ಯತೆಗಳೊಂದಿಗೆ, ಸುರಕ್ಷಿತ ಮತ್ತು ಗೌರವಾನ್ವಿತ ವಾತಾವರಣದಲ್ಲಿ ಹಾಗೂ ನ್ಯಾಯಯುತ ಪರಿಸರದಲ್ಲಿ ಮುಕ್ತವಾಗಿ ಕೆಲಸ ಮಾಡಲು ಮತ್ತು ಸಹಯೋಗಿಸಲು ಉದ್ಯೋಗಿಗಳ ಹಕ್ಕನ್ನು ಹೊಂದಿದ್ದೇವೆ, ಅಲ್ಲಿ ಅನ್ವಯವಾಗುವ ಉದ್ಯೋಗ ಮಾನದಂಡಗಳ ಅವಶ್ಯಕತೆಗಳನ್ನು ಪೂರೈಸಲು ಅಥವಾ ಅದಕ್ಕೂ ಉತ್ತಮವಾಗಿರಲು ಪ್ರಯತ್ನಿಸುತ್ತೇವೆ.

ನಮ್ಮ ಎಂಪ್ಲಾಯೀ ಚಾರ್ಟರ್‌ನಲ್ಲಿ ಇರುವಂತೆ, ಉದ್ಯೋಗಿಗಳಿಗೆ ವೈಯಕ್ತಿಕ ಗುಣಲಕ್ಷಣಗಳನ್ನು ಲೆಕ್ಕಿಸದೆಯೇ ಆಂತರಿಕ ಸಮಾನತೆ ಮತ್ತು ಬಾಹ್ಯ ಸ್ಪರ್ಧಾತ್ಮಕತೆಯ ವಸ್ತುನಿಷ್ಠ ಮಾನದಂಡಗಳು ಮತ್ತು ತತ್ವಗಳಿಗೆ ಸಂಬಂಧಿಸಿದಂತೆ, ತಾರತಮ್ಯವಿಲ್ಲದ ವೇತನ ಪದ್ಧತಿಗಳನ್ನು ಒದಗಿಸಲು ನಾವು ಬದ್ಧರಾಗಿದ್ದೇವೆ.
ನಮ್ಮೊಂದಿಗೆ ಕೆಲಸದಲ್ಲಿ ಭಾಗಿಯಾಗಿರುವ ಯಾವುದೇ ಇತರ ಕಂಪನಿ ಅಥವಾ ಪೂರೈಕೆದಾರರು ಅನ್ವಯವಾಗುವ ಕಾನೂನನ್ನು ಪಾಲಿಸಬೇಕು ಎಂಬುದು ನಮ್ಮ ನಿರೀಕ್ಷೆ.

***Q: ನನಗೆ ನಮ್ಮ ಒಬ್ಬ ಪೂರೈಕೆದಾರರು ಬಾಲ ಕಾರ್ಮಿಕರನ್ನು ಬಳಸಿಕೊಳ್ಳುತ್ತಿದ್ದಾರೆ ಎಂಬ ಅನುಮಾನವಿದೆ ನಾನೇನು ಮಾಡಬೇಕು?***

*A: ತಕ್ಷಣವೇ ಕಾನೂನು, ಅನುಸರಣೆ ಅಥವಾ ಖರೀದಿಗೆ ಸಂಬಂಧಪಟ್ಟ ಮೇಲ್ವಿಚಾರಕರಿಗೆ ವರದಿ ಮಾಡಿ.*

***Q: ಮಿಶಿಗನ್‌ನ ನಮ್ಮ ಟ್ರಾಯ್ ಕಚೇರಿಯಲ್ಲಿ ಉತ್ತರ ಅಮೆರಿಕಾದ ಪೂರೈಕೆದಾರರೊಂದಿಗೆ ಮಧ್ಯಸ್ಥಿಕೆ ವಹಿಸುವ ಒಂದು ಕೆಲಸಕ್ಕಾಗಿ ಒಬ್ಬರಿಗೆ ಬಡ್ತಿ ಕೊಡಬೇಕೆಂದು ಎಂದುಕೊಳ್ಳುತ್ತಿದ್ದೇನೆ. ಆಕೆ ಅಗತ್ಯವಿರುವ ಎಲ್ಲಾ ಅರ್ಹತೆಗಳನ್ನು ಹೊಂದಿದ್ದರೂ, ಆಕೆಯ ಅಂಗವೈಕಲ್ಯವನ್ನು ನಮ್ಮ ಕೆಲವು ಪೂರೈಕೆದಾರರು ಅನಾನುಕೂಲ ಎಂದು ಭಾವಿಸಬಹುದೇನೋ ಎಂಬ ಚಿಂತೆ ನನಗೆ. ಬೇರೆಯವರಿಗೆ ಬಡ್ತಿ ನೀಡಲು ಇದು ಸರಿಯಾದ ಕಾರಣವಾಗಬಹುದೆ?***

*A: ಇಲ್ಲ. ನಾವು ಅಂಗವೈಕಲ್ಯದಂತಹ ಕಾನೂನಿನ ಅನುಸಾರ ಮಾನ್ಯವಿರುವ ಕಾರಣಕ್ಕೆ ಯಾವುದೇ ತಾರತಮ್ಯವಿಲ್ಲದೆ ಎಲ್ಲರಿಗೂ ಸಮಾನವಾದ ಪ್ರಗತಿಯ ಅವಕಾಶವನ್ನು ಒದಗಿಸಲು ಪ್ರಯತ್ನಿಸುತ್ತೇವೆ. ಆಕೆ ಕೆಲಸಕ್ಕೆ ಸರಿಯಾದ ಅರ್ಹತೆಗಳನ್ನು ಹೊಂದಿದ್ದರೆ ಮತ್ತು ಕೆಲಸದ ಪ್ರಮುಖ ಕರ್ತವ್ಯಗಳನ್ನು ನಿರ್ವಹಿಸಬಹುದಾದರೆ, ಆಕೆಯ ಅಂಗವೈಕಲ್ಯದ ಆಧಾರದ ಮೇಲೆ ನಾವು ಆಕೆಯ ಬಡ್ತಿಯನ್ನು ನಿರಾಕರಿಸಬಾರದು.*

## ವೈವಿಧ್ಯತೆ ಮತ್ತು ಸೇರ್ಪಡೆ

ನಮ್ಮ ಉದ್ಯೋಗಿಗಳು ನಮ್ಮ ಜಾಗತಿಕ ಕಂಪನಿಯಲ್ಲಿ ಅತ್ಯಂತ ಪ್ರಮುಖ ಭಾಗಿಗಳಾಗಿದ್ದಾರೆ ನಾವು ವೈವಿಧ್ಯಮಯ ಹಿನ್ನೆಲೆಗಳು, ದೃಷ್ಟಿಕೋನಗಳು ಮತ್ತು ಸಾಮರ್ಥ್ಯಗಳ ಪ್ರತಿಭೆಯನ್ನು ಆಕರ್ಷಿಸುವ, ನೇಮಕ ಮಾಡಿಕೊಳ್ಳುವ ಮತ್ತು ಉಳಿಸಿಕೊಳ್ಳುವ ಗುರಿ ಹೊಂದಿದ್ದೇವೆ. ನಮ್ಮ ಎಂಪ್ಲಾಯೀ ಚಾರ್ಟರ್‌ನಲ್ಲಿ ಸ್ಪಷ್ಟವಾಗಿ ಹೇಳಿರುವಂತೆ ಉದ್ಯೋಗಿಗಳು ಸಂತೋಷದಿಂದ ಕೆಲಸಕ್ಕೆ ಬರಲು ಸಾಧ್ಯವಾಗುವ, ನಮ್ಮ ಮೂಲ ಮೌಲ್ಯಗಳನ್ನು ಜೀವಿಸಬಹುದಾದ,ಉತ್ತಮ ಫಲಿತಾಂಶಗಳನ್ನು ಸಾಧಿಸಬಹುದಾದ ಹಾಗೂ ನಮ್ಮ ಜಾಗತಿಕ ಬ್ರ್ಯಾಂಡ್ ಅನ್ನು ಸುಧಾರಿಸಲು ಸಾಧ್ಯವಾಗಿಸುವ ಸುರಕ್ಷಿತ, ಗೌರವಾನ್ವಿತ ಮತ್ತು ಎಲ್ಲವನ್ನೂ ಒಳಗೊಂಡ ಕಾರ್ಯಸ್ಥಳವನ್ನು ರಚಿಸುವ ಗುರಿ ಹೊಂದಿದ್ದೇವೆ

ತಾರತಮ್ಯ ಮತ್ತು ಕಿರುಕುಳವನ್ನು ನಿಷೇಧಿಸುವ ಮತ್ತು ದೂರುಗಳಿಗೆ ಸೂಕ್ತ ಪರಿಹಾರ ಒದಗಿಸುವಂತಹ ಎಲ್ಲಾ ಅನ್ವಯವಾಗುವ ಕಾರ್ಮಿಕ ಮತ್ತು ಉದ್ಯೋಗಕ್ಕೆ ಸಂಬಂಧಿಸಿದ ಕಾನೂನುಗಳಿಗೆ ನಾವು ಬದ್ಧರಾಗಿದ್ದೇವೆ. ವಯಸ್ಸು, ಜನಾಂಗ, ಧರ್ಮ, ಜನಾಂಗೀಯತೆ, ಬಣ್ಣ, ದೈಹಿಕ ಲಕ್ಷಣಗಳು, ಲಿಂಗ, ಲೈಂಗಿಕ ದೃಷ್ಟಿಕೋನ, ಲಿಂಗ ಗುರುತು/ಅಭಿವ್ಯಕ್ತಿ, ಭಾಷೆಯ ವ್ಯತ್ಯಾಸಗಳು, ರಾಷ್ಟ್ರೀಯತೆ ಅಥವಾ ರಾಷ್ಟ್ರೀಯ ಮೂಲ, ಕುಟುಂಬ ಅಥವಾ ವೈವಾಹಿಕ ಸ್ಥಿತಿ, ದೈಹಿಕ, ಮಾನಸಿಕ ಮತ್ತು ಅಭಿವೃದ್ಧಿ ಸಾಮರ್ಥ್ಯಗಳು, ಸಾಮಾಜಿಕ ಆರ್ಥಿಕ ಸ್ಥಿತಿ, ಅಥವಾ ಕಾನೂನಿನಿಂದ ರಕ್ಷಿಸಲ್ಪಟ್ಟ ಯಾವುದೇ ಇತರ ವೈಯಕ್ತಿಕ ಗುಣಲಕ್ಷಣಗಳ ಆಧಾರದ ಮೇಲೆ ಆದರೆ ಇವುಗಳಿಗಷ್ಟೇ ಸೀಮಿತವಾಗಿಲ್ಲದಂತೆ ಯಾವುದೇ ತಾರತಮ್ಯವಿಲ್ಲದೆ ಸಮಾನ ಉದ್ಯೋಗ ಮತ್ತು ವೃತ್ತಿಯಲ್ಲಿ ಪ್ರಗತಿ ಹೊಂದುವ ಅವಕಾಶಗಳನ್ನು ನೀಡಲು ಬದ್ಧರಾಗಿದ್ದೇವೆ.

## ಎಚ್ಚರಿಕೆಯ ಸಂವಹನ

ಕೆಲಸದಲ್ಲಿರುವಾಗ ಮತ್ತು ಕೆಲಸದ ಹೊರಗೆ ನಾವು ಏನು ಬರೆಯುತ್ತೇವೆ ಮತ್ತು ಹೇಳುತ್ತೇವೆ ಎಂಬುದು ನಮ್ಮಿಂದ ನಿರೀಕ್ಷಿತ ಸಮಗ್ರತೆ ಮತ್ತು ಮಾನದಂಡಗಳನ್ನು ಪ್ರತಿಬಿಂಬಿಸುತ್ತದೆ ಎಂದು ನಾವು ಖಚಿತಪಡಿಸಿಕೊಳ್ಳಬೇಕು.

ಮ್ಯಾಗ್ನ ಹಾಗೂ ಸ್ವತಃ ನಮ್ಮ ಖ್ಯಾತಿಯನ್ನು ರಕ್ಷಿಸಲು, ನಮ್ಮ ಎಲ್ಲಾ ಲಿಖಿತ ಸಂವಹನಗಳನ್ನು ಎಚ್ಚರಿಕೆಯಿಂದ ಮತ್ತು ಒಂದು ದಿನ ಅವುಗಳನ್ನು ಸಾರ್ವಜನಿಕಗೊಳಿಸಬಹುದು ಎಂಬ ತಿಳುವಳಿಕೆಯೊಂದಿಗೆ ಸಿದ್ಧಪಡಿಸುವುದು ಮುಖ್ಯವಾಗಿದೆ. ವಾಕ್ ಸ್ವಾತಂತ್ರ್ಯ ಮತ್ತು ಸಂವಹನ ನಡೆಸಲು ಎಲ್ಲಾ ಕಾನೂನು ಅರ್ಹತೆಗಳನ್ನು ನಾವು ಹೊಂದಿದ್ದರೂ ಸಹ, ಕಂಪನಿಯನ್ನು ದೂಷಿಸುವ, ಪೂರೈಕೆದಾರರು ಅಥವಾ ಗ್ರಾಹಕರನ್ನು ಅವಹೇಳನ ಮಾಡುವ, ಗೌಪ್ಯ ಮಾಹಿತಿಯನ್ನು ಬಹಿರಂಗಪಡಿಸುವ ಅಥವಾ ಮ್ಯಾಗ್ನದ ಹಕ್ಕುಸ್ವಾಮ್ಯ ಮತ್ತು ಪೇಟೆಂಟ್ ಹಕ್ಕುಗಳನ್ನು ಉಲ್ಲಂಘಿಸುವ ಯಾವುದನ್ನೂ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡದಂತೆ ನಾವು ಜಾಗರೂಕರಾಗಿರಬೇಕು.

ಜೊತೆಗೆ ಸುದ್ದಿ ಮಾಧ್ಯಮ ವರದಿಗಾರರು, ಉದ್ಯಮದ ವೃತ್ತಿಪರ ಅಥವಾ ಷೇರುದಾರರಂತಹ ಯಾರಾದರೂ ಮ್ಯಾಗ್ನಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಅಥವಾ ಕಾಮೆಂಟ್ ಮಾಡಲು ನಮ್ಮನ್ನು ಕೇಳಿದರೆ, ಹಾಗೆ ಮಾಡದೇ ಅವರನ್ನು ಅಧಿಕೃತ ಮ್ಯಾಗ್ನ ವಕ್ತಾರರನ್ನು ಸಂಪರ್ಕಿಸುವಂತೆ ಹೇಳಬೇಕು.

ನಮ್ಮ ***ಎಚ್ಚರಿಕೆಯ ಸಂವಹನದ ನೀತಿ***, ನಮ್ಮ ***ಜಾಗತಿಕ ಇಮೇಲ್, ಇಂಟರ್ನೆಟ್ ಮತ್ತು ಸಾಮಾಜಿಕ ಮಾಧ್ಯಮ ನೀತಿ*** ಮತ್ತು ನಮ್ಮ ***ಬಾಹ್ಯ ಮಾಧ್ಯಮ ಸಂವಹನ ನೀತಿ*** ಸಂವಹನಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗಾಗಿ ಲಭ್ಯವಿರುವ ಉಪಯುಕ್ತ ಸಾಧನಗಳಾಗಿವೆ.

***Q: ನಾನು ಆಗಾಗ ನಮ್ಮ ಒಬ್ಬ ಪೂರೈಕೆದಾರರ ಮೇಲಿನ ಸಿಟ್ಟನ್ನು 250 ಸ್ನೇಹಿತಿರಿರುವ ನನ್ನ ಫೇಸ್ ಬುಕ್ ಪುಟದಲ್ಲಿ ವ್ಯಕ್ತಪಡಿಸುತ್ತಿರುತ್ತೇನೆ. ನಾನು ಇದನ್ನು ನನ್ನ ಸ್ವಂತ ಸಮಯದಲ್ಲಿ ಮಾಡುತ್ತೇನೆ ಮತ್ತು ನನ್ನ ಸೆಟ್ಟಿಂಗ್‌ಗಳು ಖಾಸಗಿಯಾಗಿವೆ. ಈ ಅಪ್‌ಡೇಟ್‌ಗಳನ್ನು ನನ್ನ ಸ್ನೇಹಿತರು ಮತ್ತು ಕುಟುಂಬದವರು ಮಾತ್ರ ನೋಡಬಹುದು. ತೊಂದರೆ ಇಲ್ಲ, ಅಲ್ಲವೆ?***

*A: ಇಲ್ಲ. ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ ವಿಷಯಗಳು ಯಾವಾಗಲೂ ಖಾಸಗಿಯಾಗಿ ಉಳಿದುಕೊಳ್ಳುವುದಿಲ್ಲ. ಯಾವುದೇ ಸಾರ್ವಜನಿಕ ವೇದಿಕೆಯಲ್ಲಿ ನಮ್ಮ ಪೂರೈಕೆದಾರರನ್ನು ನಾವು ಅವಹೇಳನ ಮಾಡಕೂಡದು. ನಮ್ಮ ಪೂರೈಕೆದಾರರ ಮೇಲಿನ ಈ ಅಸಮಾಧಾನವು ಈ ನಡಾವಳಿಯ ಉಲ್ಲಂಘನೆಗಳಿಗೆ ಸಂಬಂಧಿಸಿದ್ದರೆ, ಅದನ್ನು ಕಾನೂನು, ಅನುಸರಣೆಯ ಮೇಲ್ವಿಚಾರಕರಿಗೆ, ಅಥವಾ* ***ಮ್ಯಾಗ್ನ ಹಾಟ್‌ಲೈನ್*** *. ಮೂಲಕ ವರದಿ ಮಾಡಿ. ಇತರೆ ಸಮಸ್ಯೆಗಳಿಗಾಗಿ* ***ಮ್ಯಾಗ್ನ ಓಪನ್ ಡೋರ್ ಪ್ರಕ್ರಿಯೆ*** *ಅತ್ಯಂತ ಸೂಕ್ತವಾಗಿದೆ.*

***Q: ಆನ್‌ಲೈನ್‌ನಲ್ಲಿ ಪೋಸ್ಟ್ ಮಾಡಿದ ಪತ್ರಿಕೆಯ ಲೇಖನದಲ್ಲಿ, ನಮ್ಮ ಇತ್ತೀಚಿನ ಹಣಕಾಸಿನ ಫಲಿತಾಂಶಗಳ ಕುರಿತಂತೆ ಕೆಲವು ತಪ್ಪು ಮಾಹಿತಿಗಳು ಇರುವುದು ನನ್ನ ಗಮನಕ್ಕೆ ಬಂದಿದೆ. ಪತ್ರಿಕೆಯ ವೆಬ್‌ಸೈಟ್‌ನಲ್ಲಿ ಸರಿಯಾದ ಮಾಹಿತಿಯೊಂದಿಗೆ ಕಾಮೆಂಟ್ ಮಾಡಬೇಕು ಎಂದುಕೊಳ್ಳುತ್ತಿದ್ದೇನೆ. ನಾನು ಹಾಗೆ ಮಾಡಬಹುದೆ?***

*A: ಇಲ್ಲ. ತಪ್ಪಾದ ಮಾಹಿತಿಯ ಬಗ್ಗೆ ಕೂಡಲೇ ಕಾರ್ಪೊರೇಟ್ ಸಂವಹನ ಅಥವಾ ಹೂಡಿಕೆದಾರರ ಸಂಬಂಧಗಳ ವಿಭಾಗದಲ್ಲಿ ಯಾರಿಗಾದರೂ ತಿಳಿಸಿ. ನಾವು ನಮ್ಮ ವ್ಯವಹಾರವನ್ನು ಕುರಿತು ಪೋಸ್ಟ್ ಮಾಡಿದರೆ, ನಾವು ಕಂಪನಿಯ ಅನಧಿಕೃತ ವಕ್ತಾರರಂತೆ ವರ್ತಿಸಿದಂತಾಗುತ್ತದೆ.*

## ಮ್ಯಾಗ್ನ ಹಾಟ್‌ಲೈನ್

ಈ ನಡಾವಳಿಯ ಅಥವಾ ಯಾವುದೇ ಸಂಬಂಧಪಟ್ಟ ನೀತಿಗಳ ಉಲ್ಲಂಘನೆಯ ಬಗ್ಗೆ ತಿಳಿದುಬಂದರೆ ನಾವು ಕಾನೂನು ಅಥವಾ ಅನುಸರಣೆಯ ಮೇಲ್ವಿಚಾರಕರೊಂದಿಗೆ ಮಾತನಾಡಬಹುದು. ನಾವು ಮ್ಯಾಗ್ನ ಹಾಟ್‌ಲೈನ್ ಮೂಲಕ > ನಲ್ಲಿ ಘಟನೆಯನ್ನು ವರದಿ ಮಾಡಬಹುದು ಅಥವಾ ನಾವು ಕಾರ್ಯನಿರ್ವಹಿಸುವ ಪ್ರತಿಯೊಂದು ದೇಶದ ಸ್ಥಳೀಯ, ಟೋಲ್-ಫ್ರೀ ಫೋನ್ ಸಂಖ್ಯೆಗಳನ್ನು ನೋಡಲು ನಾವು ಆ ವೆಬ್‌ಸೈಟ್ ಅನ್ನು ಬಳಸಬಹುದು ಈ ಸೇವೆಯನ್ನು ಬಾಹ್ಯ ಥರ್ಡ್ ಪಾರ್ಟಿ ಭಾಗೀದಾರರ ಮೂಲಕ ಒದಗಿಸಲಾಗುತ್ತದೆ ಮತ್ತು ಇದು ದಿನದ 24 ಗಂಟೆಗಳು, ವರ್ಷದ 365 ದಿನಗಳು ಲಭ್ಯವಿದೆ. ನಾವು ನಮ್ಮ ವರದಿಗಳನ್ನು ಅನಾಮಧೇಯವಾಗಿ ಮಾಡಬಹುದು (ಸ್ಥಳೀಯ ಕಾನೂನಿನಿಂದ ನಿಷೇಧಿಸದ ಹೊರತು). ಸಮಸ್ಯೆಯನ್ನು ಪರಿಣಾಮಕಾರಿಯಾಗಿ ತನಿಖೆ ಮಾಡಲು ದಯವಿಟ್ಟು ಸಾಕಷ್ಟು ವಿವರಗಳನ್ನು ಒದಗಿಸಿ.

***Q: ಮ್ಯಾಗ್ನ ಹಾಟ್‌ಲೈನ್ ಬಳಸಿಕೊಂಡು ನಾನು ಉಲ್ಲಂಘನೆಯನ್ನು ವರದಿ ಮಾಡಿದಾಗ ಏನಾಗುತ್ತದೆ?***

A: ಮ್ಯಾಗ್ನ ಹಾಟ್‌ಲೈನ್ ಮೂಲಕ ಸ್ವೀಕರಿಸಿದ ಎಲ್ಲಾ ವರದಿಗಳನ್ನು ಆರಂಭದಲ್ಲಿ ನಮ್ಮ ಮ್ಯಾಗ್ನ ಹಾಟ್‌ಲೈನ್ ನಿರ್ವಾಹಕರು ಪರಿಶೀಲಿಸುತ್ತಾರೆ, ಅವರು ತನಿಖೆಯ ಅಗತ್ಯವಿದೆಯೇ ಮತ್ತು ಅದನ್ನು ಯಾರು ಮುನ್ನಡೆಸಬೇಕು ಎಂಬುದನ್ನು ಪರಿಗಣಿಸುತ್ತಾರೆ. ನಮ್ಮ ತನಿಖಾ ಅಭ್ಯಾಸಗಳ ಕುರಿತು ಹೆಚ್ಚಿನ ಮಾಹಿತಿಗಾಗಿ, ನೈತಿಕತೆಯ ತನಿಖೆಗಳ ಕುರಿತಾದ ನಮ್ಮ ನೀತಿಯನ್ನು ನೋಡಿ.

# ನಮ್ಮ ವ್ಯವಹಾರ

## ಗೌಪ್ಯ ಮಾಹಿತಿಯ ಬಳಕೆ

ಇತರ ಯಾವುದೇ ಆಸ್ತಿಯ ಹಾಗೆ, ವ್ಯಾಪಾರ ರಹಸ್ಯಗಳು, ಸ್ವಾಮ್ಯದ ಮಾಹಿತಿ ಮತ್ತು ನಮಗೆ ಹಾಗೂ ಗ್ರಾಹಕರು ಅಥವಾ ಪೂರೈಕೆದಾರರಿಗೆ ಸೇರಿದ ಬೌದ್ಧಿಕ ಆಸ್ತಿಯನ್ನು ಒಳಗೊಂಡಿರುವ ಗೌಪ್ಯ ಮಾಹಿತಿಯು ನಮ್ಮ ವ್ಯವಹಾರದ ಅಮೂಲ್ಯವಾದ ಭಾಗವಾಗಿದೆ ಮತ್ತು ಅದನ್ನು ರಕ್ಷಿಸಲು ನಾವು ಬಾಧ್ಯರಾಗಿದ್ದೇವೆ. ನಮ್ಮ ***ಮಾಹಿತಿ ಗುರುತು ಮತ್ತು ನಿರ್ವಹಣೆ ನೀತಿ*** ವಿವಿಧ ಹಂತಗಳ ಗೌಪ್ಯತೆಯನ್ನುಹೊಂದಿದೆ. ಇದು ಪ್ರತಿಯೊಂದೂ ತನ್ನದೇ ಆದ ನಿಯಮಗಳನ್ನು ಹೊಂದಿರುವ ವಿವಿಧ ಹಂತದ ಮಾಹಿತಿಯನ್ನು ಹೇಗೆ ಸಂಗ್ರಹಿಸಬಹುದು, ನಕಲಿಸಬಹುದು, ಪ್ರಸಾರ ಮಾಡಬಹುದು, ರವಾನಿಸಬಹುದು ಮತ್ತು ನಾಶಪಡಿಸಬಹುದು ಎಂಬುದನ್ನು ಕುರಿತ ಮಾಹಿತಿ ಹೊಂದಿದೆ ಕಾನೂನಿನ ಪ್ರಕಾರ ಅಥವಾ ಅಧಿಕೃತ ವ್ಯಾಪಾರ ಉದ್ದೇಶಕ್ಕಾಗಿ ಅಗತ್ಯವಿಲ್ಲದಿದ್ದರೆ ಗೌಪ್ಯ ಮಾಹಿತಿಯನ್ನು ಮ್ಯಾಗ್ನ ಹೊರಗಿನ ಯಾರೊಂದಿಗೂ ಹಂಚಿಕೊಳ್ಳಬಾರದು ಹಾಗೂ "ತಿಳಿಯುವ ಅಗತ್ಯವಿದೆ" ಎಂಬ ಆಧಾರದ ಮೇಲೆ ಮಾತ್ರ ಆಂತರಿಕವಾಗಿ ಹಂಚಿಕೊಳ್ಳಬೇಕು.

***Q: ನಮ್ಮ ಗೌಪ್ಯ ಮಾಹಿತಿಯನ್ನು ರಕ್ಷಿಸಲು ನಾನು ಏನು ಮಾಡಬಹುದು?***

*A: ಗೌಪ್ಯ ಮಾಹಿತಿಯನ್ನು ರಕ್ಷಿಸಲು ನಾವು ಹಲವಾರು ಹಂತಗಳನ್ನು ಅನುಸರಿಸಬಹುದು. ನಾವು ಗೌಪ್ಯ ದಾಖಲೆಗಳು ಮತ್ತು ಮಾಹಿತಿಯನ್ನು ಬಹಳ ಎಚ್ಚರಿಕೆಯಿಂದ ವಿಶೇಷವಾಗಿ ಪ್ರಯಾಣ ಅಥವಾ ವ್ಯಾಪಾರ ಘಟನೆಗಳ ಸಮಯದಲ್ಲಿ ಜಾಗರೂಕತೆಯಿಂದ ಪರಿಗಣಿಸಬೇಕು ಹಾಗೂ ನಮ್ಮ ಎಲೆಕ್ಟ್ರಾನಿಕ್ ಸಾಧನಗಳ ಮೇಲೆ ನಿಗಾವಹಿಸಬೇಕು. ಜನನಿಬಿಡ ಎಲಿವೇಟರ್ ಅಥವಾ ಏರ್‌ಪ್ಲೇನ್‌ನಂತಹ ಸಾರ್ವಜನಿಕ ಪ್ರದೇಶಗಳಲ್ಲಿ ಮ್ಯಾಗ್ನದ ವ್ಯಾಪಾರವನ್ನು ಚರ್ಚಿಸಬಾರದು ಮ್ಯಾಗ್-ನೆಟ್ ನಲ್ಲಿ ಲಭ್ಯವಿರುವ ನಮ್ಮ ಮಾಹಿತಿ ಆಡಳಿತ ನೀತಿಗಳು ಮತ್ತು ಮಾರ್ಗಸೂಚಿಗಳನ್ನು ತಿಳಿದುಕೊಂಡಿರಬೇಕು*

.

## ಹೂಡಿಕೆಗಳು ಮತ್ತು ಕಾರ್ಪೊರೇಟ್ ಅವಕಾಶಗಳು

ನಮ್ಮ ವೈಯಕ್ತಿಕ ಹಿತಾಸಕ್ತಿಗಳು ಮ್ಯಾಗ್ನದ ಹಿತಾಸಕ್ತಿಗಳೊಂದಿಗೆ ಘರ್ಷಣೆಗೆ ಒಳಗಾಗುವ ಸಂದರ್ಭಗಳು ಅಥವಾ ಆ ಅನಿಸಿಕೆ ನೀಡುವ ಸಂದರ್ಭಗಳನ್ನು ತಪ್ಪಿಸಬೇಕು.  ಉದಾಹರಣೆಗೆ, ನಾವು ಮಾಡುತ್ತಿರುವ ಉದ್ಯೋಗದಿಂದ ಅಥವಾ ಮ್ಯಾಗ್ನದ ಆಸ್ತಿ ಅಥವಾ ಮಾಹಿತಿಯಿಂದ ಯಾವುದಾದರೂ ವ್ಯವಹಾರದ ಅವಕಾಶಗಳು ಕಂಡುಬಂದರೆ ನಾವು ಅದನ್ನು ಸ್ವಂತ ಪ್ರಯೋಜನಕ್ಕೆ ಬಳಸಿಕೊಳ್ಳಬಾರದು ವೈಯಕ್ತಿಕ ಲಾಭಕ್ಕಾಗಿ ಮ್ಯಾಗ್ನ ಸಂಪನ್ಮೂಲಗಳನ್ನು ಬಳಸಬಾರದು. ಮ್ಯಾಗ್ನದೊಂದಿಗೆ ಸ್ಪರ್ಧೆಯಲ್ಲಿ ತೊಡಗುವಂತಹ ಯಾವುದೇ ಚಟುವಟಿಕೆಯಲ್ಲಿ ನಾವು ಎಂದಿಗೂ ತೊಡಗಿಸಿಕೊಳ್ಳಬಾರದು.

***Q: ನಾನು ಎಂಜಿನಿಯರಿಂಗ್ ವಿಭಾಗದಲ್ಲಿ ಕೆಲಸ ಮಾಡುತ್ತೇನೆ ಹಾಗೂ ನನ್ನ ಕೆಲಸದ ಅವಧಿಯಲ್ಲಿ ಒಂದು ಹೊಸ ಪ್ರಸರಣ ವಿನ್ಯಾಸವನ್ನು ಕಂಡುಹಿಡಿದಿದ್ದೇನೆ. ಅದರಲ್ಲಿ ನಮ್ಮ ಕೆಲವು ಆಟೋಮೋಟಿವ್ ಗ್ರಾಹಕರಲ್ಲಿ ಆಸಕ್ತಿ ಮೂಡಬಹುದು ಎನಿಸುತ್ತದೆ  ಈ ವಿನ್ಯಾಸವನ್ನು ನಾನು ಕಂಡುಹಿಡಿದಿರುವುದರಿಂದ ಅದನ್ನು ಅವರಿಗೆ ನಾನು ನೇರವಾಗಿ ಮಾರಬಹುದೆ?***

*A: ಇಲ್ಲ, ಹಾಗೆ ಮಾಡುವುದು ನಮ್ಮ ನಡಾವಳಿಯನ್ನು ಉಲಂಘಿಸಿದಂತೆ. ನಮ್ಮ ಉದ್ಯೋಗದ ಭಾಗವಾಗಿ ನಾವು ರಚಿಸುವ ಯಾವುದೇ ಬೌದ್ಧಿಕ ಆಸ್ತಿಯು ಮ್ಯಾಗ್ನಗೆ ಸೇರುತ್ತದೆ. ಜೊತೆಗೆ ಮ್ಯಾಗ್ನದಲ್ಲಿ ನಮ್ಮ ಉದ್ಯೋಗದ ಅವಧಿಯಲ್ಲಿ ಮತ್ತು ಕಂಪನಿಯ ಸಂಪನ್ಮೂಲಗಳನ್ನು ಬಳಸಿಕೊಂಡು ಅಭಿವೃದ್ಧಿಪಡಿಸಿದ ಯಾವುದೇ ವಿನ್ಯಾಸವು ಮ್ಯಾಗ್ನಗೆ ಅಮೂಲ್ಯವಾದ ವ್ಯಾಪಾರ ಅವಕಾಶವನ್ನು ಒದಗಿಸುತ್ತದೆ. ಮ್ಯಾಗ್ನದ ಅನುಮೋದನೆಯನ್ನು ಪಡೆಯದೆ ನಾವು ಈ ಸಂದರ್ಭಗಳ ವೈಯಕ್ತಿಕ ಲಾಭವನ್ನು ತೆಗೆದುಕೊಳ್ಳಬಾರದು.*

***Q: ನಾನೊಂದು ಹೊಸ ವಿಭಾಗವನ್ನು ತೆರೆಯಬೇಕು ಅಂದುಕೊಂಡಿದ್ದೀನಿ ಹಾಗೂ ಅದನ್ನು ಮಾಡುವುದಕ್ಕೆ ಎರಡರಲ್ಲಿ ಒಂದು ದೇಶವನ್ನು ಆಯ್ಕೆ ಮಾಡಬೇಕು ಅಂದುಕೊಳ್ಳುತ್ತಿದ್ದೇನೆ. ಒಂದು ದೇಶದಲ್ಲಿ ಅಲ್ಲಿ ನಮ್ಮ***

***ವಿಭಾಗವನ್ನು ತೆರೆದರೆ ಹಿರಿಯ ಉದ್ಯೋಗಿಗಳು(ನಾನೂ ಸೇರಿದಂತೆ) ಟ್ಯಾಕ್ಸ್ ಕಟ್ಟಬೇಕಿಲ್ಲ ಎಂಬ ನಿಯಮವಿದೆ. ನಾನೇನು ಮಾಡಬೇಕು?***

*A: ವೈಯಕ್ತಿಕ ತೆರಿಗೆ ವಿರಾಮದ ಈ ಅರ್ಹತೆಯು ಆಸಕ್ತಿಯ ಸಂಘರ್ಷಕ್ಕೆ ಕಾರಣವಾಗುತ್ತದೆ. ಮ್ಯಾಗ್ನಕ್ಕಾಗಿ ನಾವು ವೈಯಕ್ತಿಕ ಪ್ರಯೋಜನಕ್ಕೆ ಕಾರಣವಾಗಬಹುದಾದ ನಿರ್ಧಾರಗಳನ್ನು ತೆಗೆದುಕೊಳ್ಳಬಾರದು. ವಿಭಾಗವನ್ನು ಎಲ್ಲಿ ತೆರೆಯಬೇಕು ಎಂಬುದರ ಕುರಿತು ಯಾವುದೇ ನಿರ್ಧಾರ ತೆಗೆದುಕೊಳ್ಳುವ ಮೊದಲು, ನಮ್ಮ ಹಿತಾಸಕ್ತಿ ಸಂಘರ್ಷಗಳ ನೀತಿಗೆ ಅನುಗುಣವಾಗಿ ಈ ವಿಷಯವನ್ನು ಬಹಿರಂಗಪಡಿಸಿ ಮತ್ತು ನಿರ್ವಹಣೆಯಿಂದ ಹೆಚ್ಚಿನ ನಿರ್ದೇಶನಗಳನ್ನು ಪಡೆದುಕೊಳ್ಳಿ.*

## ಸ್ವಯಂ-ವ್ಯವಹರಣೆ ಹಾಗೂ ಸಂಬಂಧಿಕರು ಅಥವಾ ಸ್ನೇಹಿತರೊಂದಿಗೆ ಸಂವಹನ

ನಮ್ಮ ವೈಯಕ್ತಿಕ ಆಸಕ್ತಿಗಳು ಮತ್ತು ಸಂಬಂಧಗಳು ನಮ್ಮ ಕೆಲಸದ ಜವಾಬ್ದಾರಿಗಳಿಗೆ ಅಡ್ಡಿಯಾಗಬಾರದು. ಹೀಗಾಗಿ ಯಾರಾದರೂ ಸಂಬಂಧಿಕರು ಅಥವಾ ಆಪ್ತ ಸ್ನೇಹಿತರನ್ನು ಮೇಲ್ವಿಚಾರಣೆ ಮಾಡುವುದು ಸೂಕ್ತವಲ್ಲ. ಅವರು ನಿಮಗೆ ನೇರ ವರದಿ ಮಾಡಿಕೊಳ್ಳುತ್ತಿರಲಿ ಅಥವಾ ಅವರ ಕಾರ್ಯಕ್ಷಮತೆಯ ಮೌಲ್ಯಮಾಪನ ಅಥವಾ ಸಂಬಳದ ಮೇಲೆ ನೀವು ಪ್ರಭಾವ ಬೀರುವಂತಿರಲಿ ಇದು ಸೂಕ್ತವಲ್ಲ. ನಾವು ಅಥವಾ ನಮ್ಮ ಸಂಬಂಧಿಕರು ಅಥವಾ ನಿಕಟ ಸ್ನೇಹಿತರು ಗಮನಾರ್ಹ ಆಸಕ್ತಿ ಹೊಂದಿರುವ ಕಡೆಗಳಲ್ಲಿ ನಮ್ಮ ಸಂಬಂಧಿ ಅಥವಾ ನಿಕಟ ಸ್ನೇಹಿತ ಅಥವಾ ವ್ಯಾಪಾರ ಅಥವಾ ಸಂಸ್ಥೆಯೊಂದಿಗೆ ಗುತ್ತಿಗೆಗಳು ಅಥವಾ ಇತರ ವ್ಯವಹಾರ ಸಂಬಂಧಗಳನ್ನು ನೇಮಿಸಿಕೊಳ್ಳುವ, ಮೌಲ್ಯಮಾಪನ ಮಾಡುವ, ಹಣವನ್ನು ಒದಗಿಸುವ ಅಥವಾ ಪ್ರವೇಶಿಸುವ ಸ್ಥಿತಿಯಲ್ಲಿರುವುದು ಸೂಕ್ತವಲ್ಲ.

ನಿರ್ದಿಷ್ಟವಾಗಿ ಹೇಳುವುದಾದರೆ, ನಮ್ಮ ಸಂಬಂಧಿ ಅಥವಾ ಆಪ್ತ ಸ್ನೇಹಿತರ ಸ್ಥಾನ ಅಥವಾ ಹಿತಾಸಕ್ತಿಗಳಿಂದ ಅಥವಾ ನಾವು ಅಥವಾ ನಮ್ಮ ಸಂಬಂಧಿಕರು ಅಥವಾ ಆಪ್ತ ಸ್ನೇಹಿತರು ಮತ್ತೊಂದು ವ್ಯಾಪಾರ ಅಥವಾ ಸಂಸ್ಥೆಯಲ್ಲಿ ಹೊಂದಿರುವ ಯಾವುದೇ ಮಹತ್ವದ ಆಸಕ್ತಿಯಿಂದ ನಮ್ಮ ಕೆಲಸದ ನಿರ್ಧಾರಗಳು ಪ್ರಭಾವಿತಗೊಂಡರೆ ಅಥವಾ ಅವುಗಳ ಮೇಲೆ ಪರಿಣಾಮ ಬೀರುವಂತಿದ್ದರೆ ಹಿತಾಸಕ್ತಿ ಸಂಘರ್ಷಗಳ ಮೇಲಿನ ನಮ್ಮ ನೀತಿಗೆ ಅನುಗುಣವಾಗಿ ನಾವು ಈ ಸಂದರ್ಭಗಳನ್ನು ಬಹಿರಂಗಪಡಿಸಬೇಕು. ಅಂತಹ ಎಲ್ಲಾ ವ್ಯವಹಾರಗಳು ಮತ್ತು ನಿರ್ಧಾರಗಳನ್ನು ನ್ಯಾಯಯುತ ಮತ್ತು ಪಾರದರ್ಶಕ ಆಧಾರದ ಮೇಲೆ ಮಾಡಲಾಗುತ್ತದೆ ಎಂದು ಖಚಿತಪಡಿಸಿಕೊಳ್ಳಲು ಇರುವ ಯಾವುದೇ ಕ್ರಮಗಳನ್ನು ನಾವು ಅನುಸರಿಸಬೇಕು.

***Q: ನಾನು ಖರೀದಿ ವಿಭಾಗದಲ್ಲಿ ಖರೀದಿದಾರನಾಗಿದ್ದೇನೆ. ಇತ್ತೀಚಿಗೆ ನಮ್ಮ ಒಬ್ಬ ಪೂರೈಕೆದಾರರಲ್ಲಿ ನನ್ನ ಹೆಂಡತಿ ಮಾರಾಟ ವಿಭಾಗದ ಮುಖ್ಯಸ್ಥರಾಗಿ ನೇಮಕವಾಗಿದ್ದಾರೆ. ಇದು ಹಿತಾಸಕ್ತಿ ಸಂಘರ್ಷವೇ?***

*A: ಹೌದು. ನಿಮ್ಮ ಹೆಂಡತಿಯ ಹೊಸ ಕೆಲಸವು ನಿಮ್ಮ ವ್ಯವಹಾರದ ತೀರ್ಪಿನ ಮೇಲೆ ಪರಿಣಾಮ ಬೀರಬಹುದು ಅಥವಾ ಇತರರಿಗೆ ಆ ಅನಿಸಿಕೆ ನೀಡಬಹುದು. ಹಿತಾಸಕ್ತಿ ಸಂಘರ್ಷಗಳ ಮೇಲಿನ ನಮ್ಮ ನೀತಿಗೆ ಅನುಗುಣವಾಗಿ ಈ ಸಂಘರ್ಷವನ್ನು ಬಹಿರಂಗಪಡಿಸಬೇಕು. ಆ ರೀತಿಯಲ್ಲಿ, ನಿರ್ವಹಣೆಯು ಪರಿಸ್ಥಿತಿಯನ್ನು ನಿರ್ಣಯಿಸಬಹುದು ಮತ್ತು ಸಂಘರ್ಷವನ್ನು ನಿರ್ವಹಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬಹುದು. ಇದು ಮ್ಯಾಗ್ನಗೆ ಸಹಾಯ ಮಾಡುತ್ತದೆ ಮತ್ತು ಅನುಚಿತ ನಡವಳಿಕೆಯ ಯಾವುದೇ ಆರೋಪದಿಂದ ನಿಮ್ಮನ್ನು ಮತ್ತು ನಿಮ್ಮ ಹೆಂಡತಿಯನ್ನು ರಕ್ಷಿಸುತ್ತದೆ.*

## ಹೊರಗಿನ ಸ್ಥಾನಗಳು

ಮ್ಯಾಗ್ನದ ಯಶಸ್ಸಿಗೆ ಸಹಾಯ ಮಾಡಲು, ನಾವು ಕೆಲಸದ ಸಮಯದಲ್ಲಿ ನಮ್ಮ ಕೆಲಸಗಳಿಗೆ ನಮ್ಮ ಪೂರ್ಣ ಸಮಯ ಮತ್ತು ಗಮನವನ್ನು ವಿನಿಯೋಗಿಸಬೇಕು. ಹೀಗಾಗಿ ನಾವು ಮ್ಯಾಗ್ನದಲ್ಲಿ ನಮ್ಮ ಉದ್ಯೋಗಗಳಿಗೆ ವಿನಿಯೋಗಿಸುವ ಸಮಯ ಮತ್ತು ಗಮನವನ್ನು ಕಡಿಮೆ ಮಾಡುವ ಹೊರಗಿನ ಬದ್ಧತೆಗಳನ್ನು ಸ್ವೀಕರಿಸದಿರಬಹುದು.

ನಮ್ಮ ***ಹಿತಾಸಕ್ತಿ ಸಂಘರ್ಷಗಳ ನೀತಿಗೆ*** ಅನುಸಾರವಾಗಿ ಬಹಿರಂಗಪಡಿಸದ ಹೊರತು ಹಾಗೂ ಅಗತ್ಯ ಅಧಿಕಾರಗಳನ್ನು ಪಡೆಯದ ಹೊರತು ಮ್ಯಾಗ್ನದೊಂದಿಗೆ ಹಿತಾಸಕ್ತಿಯ ಸಂಘರ್ಷವನ್ನು ಒಡ್ಡುವ ಅಥವಾ ಅಂತಹ ಸಂಘರ್ಷದ ಅನಿಸಿಕೆ ನೀಡುವ ಕೆಲಸಗಳನ್ನು(ಅದಕ್ಕಾಗಿ ಪರಿಹಾರ ಪಡೆದು ಅಥವಾ ಪಡೆಯದೆ) ಸ್ವೀಕರಿಸುವುದನ್ನು ನಿಷೇಧಿಸಲಾಗಿದೆ

## ಉಡುಗೊರೆಗಳು ಮತ್ತು ಮನರಂಜನೆ

ನಮ್ಮ ಎಲ್ಲಾ ವ್ಯಾಪಾರ ಪಾಲುದಾರರೊಂದಿಗಿನ ನಮ್ಮ ಸಂಬಂಧವು ಸಮಗ್ರತೆ ಮತ್ತು ಉತ್ತಮ ವ್ಯಾಪಾರ ತೀರ್ಪಿನ ಮೇಲೆ ಆಧಾರಿತವಾಗಿರಬೇಕು. ಪರಿಣಾಮವಾಗಿ, ನಾವು ಉಡುಗೊರೆಗಳನ್ನು ಅಥವಾ ಮನರಂಜನೆಯನ್ನು ನೀಡಿದರೆ ಅಥವಾ ಸ್ವೀಕರಿಸಿದರೆ (ಅದು ಯಾವುದಾದರೂ ಮೌಲ್ಯದ್ದಾಗಿರಬಹುದು), ನ್ಯಾಯಯುತ ವ್ಯವಹಾರಕ್ಕೆ ಮತ್ತು ಮ್ಯಾಗ್ನಗೆ ಪ್ರಯೋಜನವಾಗುವ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ನಮ್ಮ ಬದ್ಧತೆಯನ್ನು ರಾಜಿ ಮಾಡಿಕೊಳ್ಳದಂತೆ ನಾವು ಜಾಗರೂಕರಾಗಿರಬೇಕು.

ಗ್ರಾಹಕರು ಅಥವಾ ಪೂರೈಕೆದಾರರೊಂದಿಗಿನ ನಮ್ಮ ವ್ಯಾಪಾರ ಸಂಬಂಧಗಳಲ್ಲಿ, ವ್ಯಾಪಾರದ ಉಡುಗೊರೆಗಳು ಅಥವಾ ಮನರಂಜನೆಯನ್ನು ನೀಡುವುದು ಅಥವಾ ಸ್ವೀಕರಿಸುವುದು ಅವುಗಳು ಸಮಂಜಸವಾದ, ಸಾಂದರ್ಭಿಕ ಮತ್ತು ಸಾಧಾರಣ ಮೌಲ್ಯದವರೆಗೆ ಸ್ವೀಕಾರಾರ್ಹವಾಗಿದೆ, . ನಾವು ಒದಗಿಸುವ ಯಾವುದೇ ಉಡುಗೊರೆ ಅಥವಾ ಮನರಂಜನೆಯನ್ನು ನಮ್ಮ ಖರ್ಚಿನ ವರದಿಗಳು ಮತ್ತು ಮ್ಯಾಗ್ನ ಪುಸ್ತಕ ಮತ್ತು ದಾಖಲೆಗಳಲ್ಲಿ ನಿಖರವಾಗಿ ಮತ್ತು ಪಾರದರ್ಶಕವಾಗಿ ದಾಖಲಿಸಬೇಕು.

ಕಾನೂನು ಅಪಾಯಗಳು ಹೆಚ್ಚಿದ ಕಾರಣ, *ಸರ್ಕಾರಿ ಅಧಿಕಾರಿಗಳೊಂದಿಗೆ*.ವ್ಯವಹರಿಸುವಾಗ ನಾವೆಲ್ಲರೂ ವಿಶೇಷ ಕಾಳಜಿ ತೆಗೆದುಕೊಳ್ಳಬೇಕು. ಸರ್ಕಾರಿ ಅಧಿಕಾರಿಗಳಿಗೆ ಉಡುಗೊರೆ ಅಥವಾ ಮನರಂಜನೆ ನೀಡಲು ಲಿಖಿತ ಅನುಮೋದನೆಯ ಅಗತ್ಯವಿದೆ. ಅಗತ್ಯ ಅನುಮೋದನೆಗಳ ಕುರಿತು ಹೆಚ್ಚಿನ ಮಾಹಿತಿ, ಹಾಗೆಯೇ ಉಡುಗೊರೆಗಳು ಮತ್ತು ಮನರಂಜನೆಯ ಕುರಿತು ಹೆಚ್ಚುವರಿ ಮಾಹಿತಿ, ನಮ್ಮ ***ಉಡುಗೊರೆಗಳು ಮತ್ತು ಮನರಂಜನೆಯ ನೀತಿಯಲ್ಲಿ***ಸಿಗುತ್ತದೆ.

***Q: ಚಾಂಪಿಯನ್‌ಶಿಪ್‌ನಲ್ಲಿ ನನ್ನ ನೆಚ್ಚಿನ ತಂಡ ಆಡುವುದನ್ನು ನೋಡಲು ನಮ್ಮ ಪೂರೈಕೆದಾರರೊಬ್ಬರು ವಿಮಾನ ದರ ಮತ್ತು ವಸತಿ ಸೌಕರ್ಯಗಳನ್ನು ನೀಡಿದ್ದಾರೆ. ತೊಂದರೆ ಇಲ್ಲ, ಅಲ್ಲವೆ?***

*A: ಇಲ್ಲ. ನಮ್ಮ ವ್ಯವಹಾರ ನಿರ್ಧಾರಗಳು ಯಾವಾಗಲೂ ಮ್ಯಾಗ್ನದ ಉತ್ತಮ ಹಿತಾಸಕ್ತಿಗಳಿಂದ ಮಾತ್ರ ಪ್ರೇರಿತವಾಗಿರಬೇಕು. ಭಾರಿ ಉಡುಗೊರೆಗಳನ್ನು ಸ್ವೀಕರಿಸುವುದರಿಂದ ಮುಂಬರುವ ವ್ಯವಹಾರದ ನಿರ್ಧಾರಗಳಲ್ಲಿ ನಾವು ಆ ಪೂರೈಕೆದಾರರಿಗೆ ಒಲವು ತೋರುತ್ತೇವೆ ಎಂಬ ಅಭಿಪ್ರಾಯ ನೀಡಬಹುದು. ನಾವು ಸಮಂಜಸವಾದ, ಸಾಂದರ್ಭಿಕ ಮತ್ತು ಸಾಧಾರಣ ಮೌಲ್ಯದ ವ್ಯಾಪಾರ ಉಡುಗೊರೆಗಳು ಮತ್ತು ಮನರಂಜನೆಯನ್ನು ಮಾತ್ರ ಸ್ವೀಕರಿಸಬಹುದು ಸಂದೇಹವಿದ್ದಲ್ಲಿ, ಕಾನೂನು ಅಥವಾ ಅನುಸರಣೆಯೊಂದಿಗೆ ಪರಿಶೀಲಿಸಿ.*

***Q: ಹಲವು ವರ್ಷಗಳಿಂದ ನನ್ನ ವಿಭಾಗದಲ್ಲಿ ಪರಿಸರ ಲೆಕ್ಕ ಪರಿಶೋಧನೆ ನಡೆಸಿದ ಸರ್ಕಾರಿ ಲೆಕ್ಕ ಪರಿಶೋಧಕರಿಗೆ ಮುಂದಿನ ತಿಂಗಳು ಮಗು ಹುಟ್ಟಲಿದೆ ನಾನು ಅವರಿಗೆ ಒಂದು ಬಾಟಲಿ ವಿಸ್ಕಿ ಉಡುಗೊರೆಯಾಗಿ ನೀಡಬೇಕು ಅಂದುಕೊಳ್ಳುತ್ತಿದ್ದೀನಿ. ಇದಕ್ಕೆ ಅನುಮತಿ ಇದೆಯೆ?***

*A: ಸರ್ಕಾರಿ ಅಧಿಕಾರಿಗಳಿಗೆ ಉಡುಗೊರೆ ಅಥವಾ ಮನರಂಜನೆ ನೀಡಲು ನಮ್ಮ **ಉಡುಗೊರೆಗಳು ಮತ್ತು ಮನರಂಜನೆಯ ನೀತಿ**ಗೆ ಅನುಗುಣವಾಗಿ ಹೆಚ್ಚಿನ ಎಚ್ಚರಿಕೆ ಮತ್ತು ಪೂರ್ವ-ಅನುಮೋದನೆಯ ಅಗತ್ಯವಿದೆ. ಹೆಚ್ಚಿನ ಮಾಹಿತಿಗಾಗಿ, ಕಾನೂನು ಅಥವಾ ಅನುಸರಣೆಯನ್ನು ಸಂಪರ್ಕಿಸಿ.*

# ಹೆಚ್ಚುವರಿ ಸಂಪನ್ಮೂಲಗಳು

ನಮಗೆ ನಡಾವಳಿ ಮತ್ತು ನೈತಿಕತೆ ನೀತಿಯನ್ನು ಕುರಿತು ಹೆಚ್ಚಿನ ಪ್ರಶ್ನೆಗಳಿದ್ದರೆ ಅಥವಾ ಮಾಹಿತಿ ಬೇಕಿದ್ದರೆ ನಾವು ಕಾನೂನು ಅಥವಾ ಮ್ಯಾಗ್ನ ಅವರ ನೈತಿಕತೆಯ ನೀತಿ ಮತ್ತು ಕಾನೂನು ಅನುಸರಣೆ ತಂಡದ ಸದಸ್ಯರನ್ನು ಸಂಪರ್ಕಿಸಬಹುದು. ಅನುಸರಣೆ ತಂಡದ ಸದಸ್ಯರ ಪಟ್ಟಿಯನ್ನು **magna.com** ಅಥವಾ ***ನೈತಿಕತೆ ಮತ್ತು ಕಾನೂನು ಅನುಸರಣೆ MagNET ಪುಟದಲ್ಲಿ ಕಾಣಬಹುದು.***

# ಪದಕೋಶ

***ಮೌಲ್ಯದ ಯಾವುದಾದರೂ***: *ಇದು ನಗದು (ಅಥವಾ ನಗದು ಸಮಾನ, ಉಡುಗೊರೆ ಕಾರ್ಡ್‌ಗಳಂತಹ), ಉಡುಗೊರೆಗಳು, ದಾನಕ್ಕೆ ದೇಣಿಗೆ, ಊಟ, ಪ್ರಯಾಣ ವೆಚ್ಚಗಳು, ಈವೆಂಟ್ ಟಿಕೆಟ್‌ಗಳು ಅಥವಾ ಇತರ ಮನರಂಜನೆ, ಶೈಕ್ಷಣಿಕ ವೆಚ್ಚಗಳು, ರಿಯಾಯಿತಿಗಳು, ಅನುಕೂಲಗಳು, ಭವಿಷ್ಯದ ಉದ್ಯೋಗದ ಭರವಸೆಗಳು ಅಥವಾ ಕಂಪನಿಯ ಷೇರುಗಳು ಮುಂತಾದವುಗಲ್ಲಿ ಯಾವುದಾದರೂ ಆಗಿರಬಹುದು*

***ಲಂಚ***: *ಒಂದು ರೀತಿಯ ಅನುಚಿತ ಪಾವತಿ. ಲಂಚ ಎನ್ನುವುದು ಒಬ್ಬ ವ್ಯಕ್ತಿಯು ಪ್ರತಿನಿಧಿಸುವ ಸಂಸ್ಥೆಯ ಪರವಾಗಿ, ಮ್ಯಾಗ್ನಗೆ ಲಾಭ ಅಥವಾ ಪ್ರಯೋಜನ ನೀಡಲು ಮಾಡಬೇಕಾದ (ಅಥವಾ ಮಾಡದಿರುವ) ಕ್ರಿಯೆ ಅಥವಾ ನಿರ್ಧಾರದ ಮೇಲೆ ಪ್ರಭಾವ ಬೀರುವ ಪ್ರಯತ್ನವಾಗಿ ನೋಡಬಹುದಾದ ಪ್ರಯೋಜನಕ್ಕಾಗಿ ನೀಡಿದ ಅಥವಾ ನೀಡುವ ಮೌಲ್ಯದ ಯಾವುದಾದರೂ ಆಗಿದೆ*

***ಅನುಸರಣೆ***: *ಕಾನೂನಿನಲ್ಲಿ ಬರೆದಿರುವಂತೆ ಹಾಗೂ ಅದರ ಉದ್ದೇಶವಿದ್ದಂತೆ, ಈ ನಡಾವಳಿ ಹಾಗೂ ಅದರ ಎಲ್ಲ ನೀತಿಗಳನ್ನು ಪಾಲಿಸುವುದು.*

***ಹಿತಾಸಕ್ತಿ ಸಂಘರ್ಷ***: *ನಮ್ಮ ವೈಯಕ್ತಿಕ ಆಸಕ್ತಿಗಳು (ಅಥವಾ ನೀವು ಸಂಬಂಧಿಸಿರುವ ಅಥವಾ ವೈಯಕ್ತಿಕ ಸಂಬಂಧ ಹೊಂದಿರುವ ವ್ಯಕ್ತಿಯ ಹಿತಾಸಕ್ತಿಗಳು) ಮ್ಯಾಗ್ನದಿಂದ ಭಿನ್ನವಾಗಿರುವಾಗ ಮ್ಯಾಗ್ನಗೆ ವ್ಯಾಪಾರದ ನಿರ್ಧಾರ ಮಾಡಲು ಅಥವಾ ಪ್ರಭಾವ ಬೀರಲು ನಮಗೆ ಸಾಧ್ಯವಾಗುವ ಸಂದರ್ಭಗಳನ್ನು ಹಿತಾಸಕ್ತಿಯ ಸಂಘರ್ಷ ಎನ್ನುತ್ತಾರೆ*

***ಸುಲಭದ (ಅಥವಾ "ಗ್ರೀಸ್") ಪಾವತಿಗಳು***: *ಮ್ಯಾಗ್ನ ಕಾನೂನುಬದ್ಧವಾಗಿ ಬಾಧ್ಯತೆ ಹೊಂದಿರುವ ಸಾಮಾನ್ಯ ಸೇವೆ ಅಥವಾ ಮಂಜೂರಾತಿಗಳನ್ನು ಮಾಡಿಸಲು ಕೆಳಹಂತದ ಸರ್ಕಾರಿ ಅಧಿಕಾರಿಗಳಿಗೆ ಕೊಡುವ ಒಂದು ರೀತಿಯ ಲಂಚ.*

***ಒಳ್ಳೆಯ ನಂಬಿಕೆ***: *ಪ್ರಾಮಾಣಿಕ ಮತ್ತು ಪ್ರಾಮಾಣಿಕ ಉದ್ದೇಶದಿಂದ.*

***ಸರ್ಕಾರಿ ಅಧಿಕಾರಿ***: *ಒಬ್ಬ ಅಧಿಕಾರಿ ಅಥವಾ ಸರ್ಕಾರಿ ಉದ್ಯೋಗಿ, ವಿಭಾಗ ಅಥವಾ ಏಜನ್ಸಿ, ಯಾವುದೇ ಸಾರ್ವಜನಿಕ ಅಂತರಾಷ್ಟ್ರೀಯ ಏಜನ್ಸಿ, ಅಥವಾ ಸರ್ಕಾರ, ಇಲಾಖೆ ಅಥವಾ ಸಾರ್ವಜನಿಕ ಅಂತರಾಷ್ಟ್ರೀಯ ಏಜೆನ್ಸಿಯ ಪರವಾಗಿ ಯಾವುದೇ ಅಧಿಕೃತ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುವ ಯಾವುದೇ ವ್ಯಕ್ತಿ, ಹಾಗೆಯೇ ನಮ್ಮ ಕಾರ್ಯವಿಧಾನಗಳ ಮೂಲಕ ಸರ್ಕಾರಿ ಅಧಿಕಾರಿ ಎಂದು ಪರಿಗಣಿಸಲಾದ ಯಾವುದೇ ವ್ಯಕ್ತಿ.*

***ಆಂತರಿಕ ಮಾಹಿತಿ***: *ಹೂಡಿಕೆದಾರರು ಅಥವಾ ಸಾರ್ವಜನಿಕರಿಗೆ ಗೊತ್ತಿರದ ಮಾಹಿತಿ, ಅದು ತಿಳಿದಿದ್ದರೆ, ಕಂಪನಿಯ ಮೌಲ್ಯ ಅಥವಾ ಅದರ ಸ್ಟಾಕ್ ಅಥವಾ ಬಾಂಡ್‌ಗಳ ಬಗ್ಗೆ ಅವರ ದೃಷ್ಟಿಕೋನವನ್ನು ಗಮನಾರ್ಹವಾಗಿ ಬದಲಾಯಿಸುವಂತಹ ಮಾಹಿತಿ. ಉದಾಹರಣೆಗೆ ಪ್ರಮುಖ ಸ್ವಾಧೀನ ಅಥವಾ ವಿಲೀನ, ಹಿರಿಯ ನಿರ್ವಹಣೆಯಲ್ಲಿನ ಬದಲಾವಣೆಗಳು, ಮಹತ್ವದ ದಾವೆ ಅಥವಾ ಕಾರ್ಮಿಕ ವಿವಾದಗಳು ಇತ್ಯಾದಿ*

***ಕಿಕ್‌ಬ್ಯಾಕ್***: *ಈಗಾಗಲೇ ಪಾವತಿಸಿದ ಅಥವಾ ಮುಂದೆ ಪಾವತಿಸಬೇಕಾದ ಹಣವನ್ನು ವ್ಯಾಪಾರವನ್ನು ವ್ಯವಸ್ಥೆಗೊಳಿಸಲು ಅಥವಾ ಪೋಷಿಸಲು ವೈಯಕ್ತಿಕ ಪ್ರತಿಫಲವಾಗಿ ಹಿಂದಿರುಗಿಸುವ ರೂಪದ ಲಂಚ*

***ಲಾಬಿಯಿಂಗ್***: *ಸಾರ್ವಜನಿಕ ಕಚೇರಿಗೆ ಚುನಾಯಿತರಾದ ವ್ಯಕ್ತಿಗಳು, ಸಿಬ್ಬಂದಿ ಮತ್ತು ಸರ್ಕಾರಿ ಏಜೆನ್ಸಿಗಳ ನೌಕರರು ಸೇರಿದಂತೆ, ನಿರ್ಣಯ ಮಾಡುವಿಕೆಯನ್ನು ಉತ್ತೇಜಿಸಲು, ವಿರೋಧಿಸಲು ಅಥವಾ ಪ್ರಭಾವ ಬೀರಲು ಉದ್ದೇಶಿಸುವ ವ್ಯಕ್ತಿಗಳು ಸೇರಿದಂತೆ ಸರ್ಕಾರದ ಯಾವುದೇ ಹಂತದ ಸರ್ಕಾರಿ ಅಧಿಕಾರಿಗಳೊಂದಿಗೆ ಸಂವಹನ*

***ವೈಯಕ್ತಿಕ ಮಾಹಿತಿ***: *ಗುರುತಿಸಲಾದ ಅಥವಾ ಗುರುತಿಸಬಹುದಾದ ವ್ಯಕ್ತಿಗೆ ಸಂಬಂಧಿಸಿದ ಮಾಹಿತಿ. ಒಬ್ಬ ವ್ಯಕ್ತಿಯನ್ನು ನೇರವಾಗಿ ಅಥವಾ ಪರೋಕ್ಷವಾಗಿ, ಈ ಕೆಳಗಿನಂತೆ ಗುರುತಿಸಬಹುದಾದರೆ ಅವರನ್ನು ಗುರುತಿಸಬಹುದಾದ ವ್ಯಕ್ತಿ ಎನ್ನಬಹುದು. (i) ಅವರ ಹೆಸರು, ID ಸಂಖ್ಯೆ, ಅಥವಾ ಸ್ಥಳದ ಮಾಹಿತಿಯಿಂದ ಅಥವಾ (ii) ಅವರ ಬಗ್ಗೆ, ಭೌತಿಕ, ಸಾಮಾಜಿಕ ಅಥವಾ ಹಣಕಾಸಿನ ವಿವರಗಳನ್ನು ವ್ಯಕ್ತಪಡಿಸುವ ಅಂಶಗಳಂತಹ ಗುರುತಿಸುವಿಕೆ.*

***ವೈಯಕ್ತಿಕ ಮಾಹಿತಿಯನ್ನು ಪ್ರಕ್ರಿಯೆಗೊಳಿಸಲಾಗುತ್ತಿದೆ***: *ವೈಯಕ್ತಿಕ ಮಾಹಿತಿಯನ್ನು ಸಂಗ್ರಹಿಸುವುದು, ರೆಕಾರ್ಡ್ ಮಾಡುವುದು, ಸಂಘಟಿಸುವುದು, ರಚನೆ ಮಾಡುವುದು, ಸಂಗ್ರಹಿಸುವುದು, ಬದಲಾಯಿಸುವುದು, ಬಳಸುವುದು, ಬಹಿರಂಗಪಡಿಸುವುದು, ಅಳಿಸುವುದು ಅಥವಾ ನಾಶಪಡಿಸುವುದು ಸೇರಿದಂತೆ ವೈಯಕ್ತಿಕ ಮಾಹಿತಿಯೊಂದಿಗೆ ನಿರ್ವಹಿಸಲಾದ ಯಾವುದೇ ಕಾರ್ಯಾಚರಣೆ(ಗಳು).*

***ಸಂಬಂಧಿಗಳು ಅಥವಾ ಆಪ್ತ ಸ್ನೇಹಿತರು***: *ಹೆಂಡತಿ, ಸಂಗಾತಿ, ಮಕ್ಕಳು, ತಂದೆ ತಾಯಿ, ಅಜ್ಜ ಅಜ್ಜಿ, ಅಜ್ಜ ಅಜ್ಜಿಯರ ಸಹೋದರ ಸಹೋದರಿ, ಚಿಕ್ಕಪ್ಪ ಚಿಕ್ಕಮ್ಮ, ಸೋದರ ಸೊಸೆ, ಸೋದರಳಿಯ, ಅತ್ತೆ ಮಾವಂದಿರ ಸಂಬಂಧಿಗಳು, ಮಲ ಸಂಬಂಧ, ದತ್ತು/ಪೋಷಕ ಸಂಬಂಧಗಳು, ನಮ್ಮ ಮನೆಗಳಲ್ಲಿ ವಾಸಿಸುವ ನಮಗೆ ಸಂಬಂಧಿಸಿದ ವ್ಯಕ್ತಿ ಮತ್ತು ನಾವು ಕೆಲಸದ ಹೊರಗೆ ಬೆರೆಯುವ ಸ್ನೇಹಿತರು.*

***ಮಹತ್ವದ ಆಸಕ್ತಿ***: *ಈ ಕೆಳಗಿನ ಸಂದರ್ಭಗಳಲ್ಲಿ ಒಬ್ಬ ವ್ಯಕ್ತಿಯು ವ್ಯವಹಾರದಲ್ಲಿ ಗಮನಾರ್ಹ ಆಸಕ್ತಿಯನ್ನು ಹೊಂದಿದ್ದಾರೆ ಎಂದರ್ಥ. (i) ನೇರವಾಗಿ ಅಥವಾ ಪರೋಕ್ಷವಾಗಿ ಹತ್ತು ಪ್ರತಿಶತ (10%) ಅಥವಾ ಹೆಚ್ಚಿನ ಷೇರುಗಳು, ಆಸ್ತಿಗಳು ಅಥವಾ ವ್ಯವಹಾರದ ಇತರ ಆಸಕ್ತಿಗಳನ್ನು ನಿಯಂತ್ರಿಸುತ್ತಿದ್ದರೆ; (ii) ವ್ಯವಹಾರದಲ್ಲಿ ತಮ್ಮ ನಿವ್ವಳ ಮೌಲ್ಯದ ಹತ್ತು ಪ್ರತಿಶತ (10%) ಅಥವಾ ಹೆಚ್ಚಿನ ಹೂಡಿಕೆ ಮಾಡಿದ್ದರೆ; (iii) ವ್ಯವಹಾರದಲ್ಲಿ ನಾಯಕತ್ವದ ಪಾತ್ರವನ್ನು ಹೊಂದಿದ್ದರೆ; ಅಥವಾ (iv) ಮ್ಯಾಗ್ನ ಜೊತೆಗಿನ ವ್ಯಾಪಾರ ಸಂಬಂಧದಿಂದ ನೇರವಾಗಿ ಪ್ರಯೋಜನ ಪಡೆಯುತ್ತಿದ್ದರೆ*

***ಥರ್ಡ್ ಪಾರ್ಟಿ***: *ಮ್ಯಾಗ್ನದಿಂದ ಹೊರಗೆ ಕಾರ್ಯನಿರ್ವಹಿಸುವ ವ್ಯಕ್ತಿ, ಸಂಸ್ಥೆ ಅಥವಾ ವ್ಯವಹಾರ.*

**ಮೊದಲು ಜಾರಿಯಾದದ್ದು:** 01 ಮೇ 2016
**ಹೊಸ ಆವೃತ್ತಿ:** 01 ಮೇ 2022
**ಮುಂದಿನ ವಿಮರ್ಶೆ**: Q2 2025
**ನೀಡಿದವರು:** ನೈತಿಕತೆ ಮತ್ತು ಕಾನೂನು ಅನುಸರಣೆ
**ಅನುಮೋದಿಸಿದವರು:** ನಿರ್ದೇಶಕರ ಮಂಡಳಿ

ಮ್ಯಾಗ್ನ ಇಂಟರ್ನ್ಯಾಷನಲ್ ಇಂಕ್
337 ಮ್ಯಾಗ್ನ ಡ್ರೈವ್
ಅರೋರಾ, ಒಂಟಾರಿಯೊ
ಕೆನಡಾ L4G 7K1
ದೂರವಾಣಿ: (905) 726-2462

**ಮ್ಯಾಗ್ನ ಸಂಪರ್ಕಿಸಿ**

**magna.com**

